ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01,	Issue: 45	RNI Number : KNKAN/25/A2770	19-02-2026	Thursday	Page 04,	Price 2/-	suddinimmuru@gmail.com	Mob:-8660146563
ಸಂಪುಟ :01	ಸಂಚಿಕೆ :45	ರಾಯಚೂರು	19-02-2026	ಗುರುವಾರ	ಪುಟ 04	ಬೆಲೆ ರೂ.2/-		ಮೊ:8660146563

ಇಂದು ಸಾರಿಗೆ ನೌಕರರ 'ಬೆಂಗಳೂರು ಚಲೋ'

2 ಪ್ರಮುಖ ಬೇಡಿಕೆ ಈಡೇರಿಕೆಗೆ ಹೋರಾಟ; ಬಸ್ ಸಂಚಾರ ವ್ಯತ್ಯಯ ಸಾಧ್ಯತೆ

ಬೆಂಗಳೂರು,ಫೆ.18-

ವೇತನ ಪರಿಷ್ಕರಣೆ ಮತ್ತು ಬಾಕಿ ವೇತನ ಪಾವತಿಗೆ ಒತ್ತಾಯಿಸಿ ಸಾರಿಗೆ ನೌಕರರು ನಾಳೆ (ಫೆಬ್ರವರಿ 19) ಬೆಂಗಳೂರು ಚಲೋ ಪ್ರತಿಭಟನೆ ನಡೆಸಲಿದ್ದು, ರಾಜ್ಯಾದ್ಯಂತ ಸರ್ಕಾರಿ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ), ಎನ್‌ಡಬ್ಲ್ಯೂಕೆಆರ್‌ಟಿಸಿ ನೌಕರರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ ತಿಳಿಸಿದೆ.

2 ಪ್ರಮುಖ ಬೇಡಿಕೆಗಳಿಗಾಗಿ ಹೋರಾಟ: ಸಾರಿಗೆ ಕಾರ್ಮಿಕರ ಸಂಘಗಳ ಜಂಟಿ ಕ್ರಿಯಾ ಸಮಿತಿಯು ರಾಜ್ಯ ಸರ್ಕಾರಕ್ಕೆ ಫೆಬ್ರವರಿ 19ರಂದು ಸಂಜೆ 4 ಗಂಟೆಯವರೆಗೆ ತಮ್ಮ ಎರಡು ಪ್ರಮುಖ ಬೇಡಿಕೆಗಳಾದ 38 ತಿಂಗಳ ಬಾಕಿ ಪಾವತಿ ಮತ್ತು 2024ರ ಜನವರಿಯಿಂದ ಹೊಸ ವೇತನ ಪರಿಷ್ಕರಣೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗಡುವು ನೀಡಿದೆ. ಈ ಕುರಿತು ಯಾವುದೇ ಕ್ರಮ ವಹಿಸದೇ ಹೋದಲ್ಲಿ ಫೆಬ್ರವರಿ 20 ರಿಂದ ಬಸ್ ಸೇವೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಎಚ್ಚರಿಕೆಯನ್ನು ಯೂನಿಯನ್ ನಾಯಕರು ನೀಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಲದ ಅಧ್ಯಕ್ಷ ಡಿ.ಎ.ವಿಜಯಭಾಸ್ಕರ್ ಮಾತನಾಡಿ, ಎರಡು ವರ್ಷಗಳಿಂದ ಈ ಸಮಸ್ಯೆಗಳು ಬಗೆಹರಿದಿಲ್ಲ. ಸತತ ಮಾತುಕತೆಗಳ ಹೊರತಾಗಿಯೂ ಸರ್ಕಾರದಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿಲ್ಲ. ಹೀಗಾಗಿ, ನಮಗೆ ಪ್ರತಿಭಟಿಸುವುದು ಬಿಟ್ಟು ಬೇರೆ ದಾರಿಯಿಲ್ಲ ಎಂದು ಹೇಳಿದ್ದಾರೆ.



ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ: ಸಂಘದ ಧೀಮಂತ ನಾಯಕ ಅನಂತ ಸುಬ್ಬರಾವ್ ಅವರ ನಿಧನದಿಂದಾಗಿ ಮುಂದೂಡಲ್ಪಟ್ಟ ಪ್ರತಿಭಟನೆ ಈಗ ಫೆಬ್ರವರಿ 19ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನಡೆಯಲಿದೆ. ರಾಜ್ಯಾದ್ಯಂತ ಸುಮಾರು 10ರಿಂದ 15 ಸಾವಿರ ಸಾರಿಗೆ ನೌಕರರು ಬೆಂಗಳೂರಿನಲ್ಲಿ ಸೇರುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

ಜೊತೆ ಮಾತನಾಡಿದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಾರ್ಯದರ್ಶಿ ರಜನೀಕಾಂತ್, ಪ್ರತಿಭಟನೆಯು ಯೋಜಿತ' ಮಾಡಲಾಗುವುದು, ಪ್ರತಿಭಟನೆ ರದ್ದಾಗಿಲ್ಲ. ಸರ್ಕಾರ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ, ನಾವು ಅದನ್ನು ಸಾರ್ವಜನಿಕವಾಗಿ ಘೋಷಿಸುತ್ತೇವೆ. ಇಲ್ಲದಿದ್ದರೆ, ನಮ್ಮ ಹೋರಾಟ ಮುಂದುವರಿಯುತ್ತದೆ. ಈ ಕುರಿತು ನಾಳೆ ಸಂಜೆ 4 ಗಂಟೆಗೆ ಪತ್ರಿಕಾಗೋಷ್ಠಿ ನಡೆಸಲಾಗುವುದು ಎಂದು ಹೇಳಿದರು.

ಡಿಪೋಗಳಲ್ಲಿ ಕಾರ್ಮಿಕರು ತಮ್ಮ ಕುಂದುಕೊರತೆಗಳನ್ನು ಚರ್ಚಿಸಲು ಪ್ರಯತ್ನಿಸಿದಾಗ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ರಜನೀಕಾಂತ್ ಆರೋಪಿಸಿದರು.

'ಕೆಲಸಕ್ಕೆ ಹಾಜರಾಗಿ, ಇಲ್ಲವೇ ಕ್ರಮ': ಇತ್ತ, ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಮ್ ಪಾಷಾ ಸಾರಿಗೆ ನೌಕರರಿಗೆ ಕೆಲಸಕ್ಕೆ ಹಾಜರಾಜಲು ಸೂಚನೆ ನೀಡಿದ್ದಾರೆ. ಕರ್ತವ್ಯಕ್ಕೆ ಹಾಜರಾಗದೇ ಹೋದಲ್ಲಿ ವೇತನ ಕಡಿತ ಸೇರಿದಂತೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಗೈರಾಗುವ ನೌಕರರ ಪಟ್ಟಿಯನ್ನು ಘಟಕವಾರು ಸಿದ್ಧಪಡಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೆಲಸ ಮಾಡದಿದ್ದಾಗ ವೇತನವಿಲ್ಲ ಎಂಬ ತತ್ವದಡಿ ಕ್ರಮ ಜರುಗಿಸಲಾಗುತ್ತದೆ ಎಂದು ಎಂಡಿ ಎಚ್ಚರಿಸಿದ್ದಾರೆ. ವಿದ್ಯಾರ್ಥಿಗಳು, ಪ್ರಯಾಣಿಕರಲ್ಲಿ ಕಳವಳ: ಸಾರಿಗೆ ಬಸ್ ನೌಕರರರ ಮುಷ್ಕರದಿಂದ ವಿದ್ಯಾರ್ಥಿಗಳು ಮತ್ತು ದೈನಂದಿನ ಪ್ರಯಾಣಿಕರು ಸಮಸ್ಯೆ ಎದುರಿಸುವ ಸಾಧ್ಯತೆ ಇದೆ. ವಿಶೇಷವಾಗಿ ಪಿಯು ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ವಿದ್ಯಾರ್ಥಿಗಳು ಸಂಚಾರ ಸಮಸ್ಯೆಗೆ ತುತ್ತಾಗಲಿದ್ದಾರೆ. ಇದರಿಂದ ಎಚ್ಚರಿಕೆ ಕ್ರಮವಾಗಿ ಸಾರಿಗೆ ನೌಕರರ ಸಂಘಗಳ ಸದಸ್ಯರು ಬಸ್ ನಿಲ್ದಾಣಗಳಲ್ಲಿ ಎಚ್ಚರಿಕೆ ಕರಪತ್ರಗಳನ್ನು ವಿತರಿಸಿದರು.


ರಾಜ್ಯ ಹೆದ್ದಾರಿ ಪಕ್ಕ ಮರಗಳ ನಾಶ - ರೈತ ಸಂಘಟನೆಯ ಆಕ್ರೋಶ, ತನಿಖೆಗೆ ಆಗ್ರಹ

ಜಾಲಹಳ್ಳಿ,ಫೆ.18-

ರಾಜ್ಯ ಹೆದ್ದಾರಿ ಪಕ್ಕದಲ್ಲಿ ಹತ್ತಾರು ಮರಗಳನ್ನು ಅಕ್ರಮವಾಗಿ ಕಡಿದು ನಾಶಪಡಿಸಿರುವ ಘಟನೆ ಸ್ಥಳೀಯರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಅರಣ್ಯ ಸಂರಕ್ಷಣೆಗೆ ಸರ್ಕಾರ ಕೋಟ್ಯಾಂತರ ರೂ. ವೆಚ್ಚ ಮಾಡುತ್ತಿರುವ ಸಂದರ್ಭದಲ್ಲೇ ಗಿಡಗಳ ''ಮರಣಹೊಮ'' ನಡೆಯುತ್ತಿದ್ದರೂ ಅಧಿಕಾರಿಗಳು ಮೌನ ವಹಿಸಿರುವುದು ಪ್ರಶ್ನಾರ್ಹವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘಟನೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಕುಡಿಯುವ ನೀರಿನ ಯೋಜನೆ ಕಾಮಗಾರಿಯ ನೆಪದಲ್ಲಿ ಶಂಕರನಾರಾಯಣ ಕಂಪನಿಯವರು ರಸ್ತೆಬದಿ ರಕ್ಷಣಾ ಕಂಬಗಳನ್ನು ಅಕ್ರಮವಾಗಿ ಕಿತ್ತೆಸೆದು, ಅರಣ್ಯ ಇಲಾಖೆಗೆ ಸೇರಿದ ಗಿಡಗಳನ್ನು ನಾಶಪಡಿಸಿರುವ ಘಟನೆ ಮಂಗಳವಾರ ಜಾಲಹಳ್ಳಿ ಸಮೀಪದ ಎಚ್‌ಪಿ ಪೆಟ್ರೋಲ್ ಪಂಪ್ ಬಳಿ ನಡೆದಿದೆ.

ಸ್ಥಳಕ್ಕೆ ರೈತ ಮುಖಂಡರು ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಬಳಿಕ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಜೆಸಿಬಿಯನ್ನು ವಶಕ್ಕೆ ಪಡೆದಿರುವುದಾಗಿ ತಿಳಿದುಬಂದಿದೆ.



ತಕ್ಷಣ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘಟನೆ ಆಗ್ರಹಿಸಿದೆ. ರಾಜ್ಯ ಹೆದ್ದಾರಿ ಪಕ್ಕದ ರಕ್ಷಣಾ ಕಂಬಗಳನ್ನು ಅಕ್ರಮವಾಗಿ ತೆರವುಗೊಳಿಸಿರುವ ಆರೋಪಕ್ಕೂ ಸ್ಪಷ್ಟನೆ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೆ.ಆರ್.ಎಸ್. ಭ್ರಷ್ಟಾಚಾರ ವಿರುದ್ಧ ಹೋರಾಟ ಬಸವರಾಜ ಅಮಿನಗಡ

ಲಿಂಗಸ್ಗೂರ:ಫೆ-18-

ಲಿಂಗಸ್ಗೂರ ಸರಕಾರಿ ಆಸ್ಪತ್ರೆಯು ಅನೈತಿಕ ಅಕ್ರಮವಾಗಿ ಭ್ರಷ್ಟಾಚಾರ ತಾಂಡವಾ ಡುತ್ತಿದೆ ಎಂದು ಕೆ.ಆರ್.ಎಸ್ ಪಕ್ಷದ ಮಸ್ಕಿ ತಾಲ್ಲೂಕು ಅಧ್ಯಕ್ಷ ಬಸವರಾಜ ಅಮಿನಗಡ ಆರೊಪಿಸಿದರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಸರಕಾರಿ ಆಸ್ಪತ್ರೆಯ ವೈದ್ಯರು ಬಡವರಿಗೆ ಉಚಿತ ಚಿಕಿತ್ಸಾ ನೀಡ ಬೇಕು ಆದರೆ ನಮ್ಮ ಲಿಂಗಸ್ಗೂರ ತಾಲ್ಲೂಕು ಆಸ್ಪತ್ರೆಯ ಭ್ರಷ್ಟಾಚಾರ ಲಂಚ ನೀಡಿದವರಿಗೆ ಮೊದಲ ಆದ್ಯತೆ ಎಂಬಂತೆ ವರ್ತಿಸುತ್ತವೆ.ಕೆಳಗೆ ಎರಡು ದಿನಗಳ ಹಿಂದೆ ದಲಿತ ಮುಖಂಡ ಮೊಹನ



ಗೋಸ್ಲೆ ಅವರು ದಲಿತ ವೈದ್ಯರ ವಿರುದ್ದು ಕೆಲವರು ಸುಳ್ಳು ಆರೋಪ ಮಾಡುತಿದ್ದಾರೆ ಎಂದ ಪತ್ರಿಕೆ ಮುಕಾಂತರ ನಮ್ಮ ಗಮನಕ್ಕೆ ಬಂದಿದ್ದು ನಮಗೆ ಹಲವಾರು ದಿನಗಳಿಂದ ಆಸ್ಪತ್ರೆಯ ಲಂಚವತಾರ ಗಮನಕ್ಕೆ ಬಂದಿದ್ದು ಕೂಡಲೆ ತಾಲ್ಲೂಕು ವೈದ್ಯಾದಿ ಕಾರಿಗಳಿಗೆ ಪತ್ರದ ಮುಕಾಂತರ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಆಗ್ರಹಿಸಿದ್ದೆವು.

ಸರ್ವಾಜನಿಕ ಹಿತದೃಷ್ಟಿಯಿಂದ ಭ್ರಷ್ಟಾಚಾರ ನಡೆಸುವವರ ಜೊತೆ ಎಂದಿಗೂ ಕೈಜೋಡಿಸೊದಿಲ್ಲ ಈ ಹಿಂದೆ ಹೆರಿಗೆಗೆ ಬಂದವರು ಮಧ್ಯವರ್ತಿಗಳಿಂದ ವೈದ್ಯರು ಲಂಚ ಪಡೆಯುತ್ತಿದ್ದಾರೆ ಅದು ನಾರಮಲ್ 5000, ಸೀಜರೀನ್,10,000, ಪಡೆಯು ತ್ತಾರೆ ಎಂದೂ ಆರೋ ಪಗಳು ಬಂದಿದ್ದು ಈ ಪ್ರಕರಣ

3ನೇ ಪುಟಕ್ಕೆ



ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಶಾಸಕ ಬಸನಗೌಡ ದದ್ದಲ್ ಭಾಗಿ

ರಾಯಚೂರು ಫೆ.18

ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಸನಗೌಡ ದದ್ದಲ್ ಅವರು ಫೆ.18ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಭಾಗಿಯಾದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಲಾದ 04 ಅಧಿಸೂಚನೆಗಳಿಗೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರೊಂದಿಗಿನ ಸಭೆಯಲ್ಲಿ ಹಲವಾರು ವಿಷಯಗಳ ಕುರಿತು ಅವರು ಚರ್ಚಿಸಿದರು. ಈ ಸಂದರ್ಭದಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ತೆರವು ಮಾಡಿದ ಅಂಬೇಡ್ಕರ್ ನಾಮಫಲಕ ಘನತೆಯಿಂದ ಮರು ಸ್ಥಾಪಿಸಿ: ದಲಿತಪರ ಸಂಘಟನೆಗಳ ಒಕ್ಕೂಟ ಆಗ್ರಹ



ಮಾನ್ವಿ,ಫೆ.18-

ಸಮೀಪದ ಹಿರೇಕೋಟ್ನೆಕಲ್ ಗ್ರಾಮದಲ್ಲಿ ತೆರವು ಮಾಡಿದ ನಾಮಫಲಕ ಮರುಸ್ಥಾಪಿಸಲು ಮಾನ್ವಿಯ ದಲಿತ ಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಆಗ್ರಹಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಸುಮಾರು10-12 ವರ್ಷಗಳ ಹಿಂದೆ ಹಾಕಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ ನಾಮಫಲಕವನ್ನು ಇತ್ತೀಚೆಗೆ ರಾಯಚೂರು ಕೊಪ್ಪಳ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಉನ್ನತೀಕರಣಗೊಂಡ ಕಾರಣ ರಸ್ತೆ ಅಗಲೀಕರಣ ಮಾಡುವ ವೇಳೆ ತಾಲೂಕು ಆಡಳಿತ ಮತ್ತು ಹೆದ್ದಾರಿ ಅಭಿರುದ್ಧಿ ಪ್ರಾಧಿಕಾರದ ಅಧಿಕಾರಿಗಳು ತೆರವು ಮಾಡಿ ವಾರದೊಳಗೆ ಮತ್ತೆ ಮರು ಸ್ಥಾಪನೆ ಮಾಡುವುದಾಗಿ ಆಶ್ವಾಸನೆ ನೀಡಿದ್ದರು.ತೆರವು ಮಾಡಿ ಸುಮಾರು ನಾಲ್ಕು ತಿಂಗಳಾದರೂ ಸರಿಪಡಿಸುವ ಕುರಿತು ಹಲವಾರು ಬಾರಿ ತಾಲೂಕು ಆಡಳಿತ ಕಚೇರಿಗೆ ಭೇಟಿಯಾಗಿ ಮನವಿ ಮಾಡಿದರೂ ಮಾನ್ವಿ ತಹಸೀಲ್ದಾರ್ ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿ ವಿಕಾಸ್ ಹಾಗೂ ಸುಬ್ರಮ ಣ್ಯ ಇವರು ದಿನಕ್ಕೊಂದು ಸುಳ್ಳು ಹೇಳುತ್ತ ಕಾಲಹರಣ ಮಾಡುತ್ತಿದ್ದಾರೆ. ರಸ್ತೆ ಕಾಮಗಾರಿಗೆ ತೆಗೆದು ಹಾಕಿದ ಅಂಬೇಡ್ಕರ್ ನಾಮಫಲಕವನ್ನು ಘನತೆಯಿಂದ ಮರು ಸ್ಥಾಪಿಸದ ತಾಲೂಕು ಆಡಳಿತ ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ದಿ. 23-02-2026 ರಂದು ಗ್ರಾಮದ ಹೆದ್ದಾರಿ ರಸ್ತೆ ತಡೆ ನಡೆಸಿ ಸಮಸ್ಯೆ ಸರಿಪಡಿಸಲು ಲಿಖಿತ ಭರವಸೆ ನೀಡುವ ತನಕ ಧರಣಿ ಸತ್ಯಾಗ್ರಹ ನಡೆಸಲಾಗುವದು ಎಂದು

3ನೇ ಪುಟಕ್ಕೆ

ಬಾಗಲವಾಡ; ಮಗ ಹೋದರು ಮಾಂಗಲ್ಯ ಬೇಕು ನಾಟಕ ಅಯ್ಯಣ್ಣ ತಾತ ಗಲಗ ಶ್ರೀಗಳಿಂದ ಉದ್ಘಾಟನೆ

ಸಿರವಾರ,ಫೆ.೧೮- ತಾಲೂಕಿನ ಸಮೀಪದ ಬಾಗಲವಾಡ ಗ್ರಾಮ ದಲ್ಲಿ ಮಗ ಹೋದರು ಮಾಂಗಲ್ಯ ಬೇಕು ಎಂಬ ಸುಂದರ ಸಾಮಾಜಿಕ ನಾಟಕವನ್ನು ಶ್ರೀ ಅಯ್ಯಣ್ಣ ತಾತ ಗಲಗ್ ಹಾಗೂ ಕಲ್ಲಂಗೇರಿ ಶ್ರೀಗಳು ಉದ್ಘಾಟಿ ಸಿದರು.

ಮಾತನಾಡಿದ ಶ್ರೀಗಳು ಗ್ರಾಮೀಣ ಭಾಗದಲ್ಲಿ ಸಾಮಾಜಿಕ ನಾಟಕ ಮತ್ತು ಪೌರಾಣಿಕ ನಾಟಕ ಗಳು ಅಳಿವಿನಂಚಿನಲ್ಲಿದ್ದು ಇಂತಹ ಹೊತ್ತಲ್ಲಿ ಯುವಕರು ಸಾಮಾಜಿಕ ಹಾಗೂ ಬಯಲಾಟ ಗಳಲ್ಲಿ ಹೆಚ್ಚು ಪಾತ್ರಗಳಲ್ಲಿ ಕಾಣಿಸಿಕೊ ಂಡು ಮೊಬೈಲ್ ಫೇಸ್ಬುಕ ಜಾಲತಾಣದ ನಡುವೆ ಶೆಡ್ ಒಡೆದು ಸುಂದರ ಸಾಮಾಜಿಕ ನಾಟಕ ಆಡುತ್ತಿದ್ದು ಅವರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು ನಂತರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಬಿ ತಿಪ್ಪಣ್ಣ ವಕೀಲರು ಮಾತನಾಡಿದ ನಮ್ಮ ಪೂರ್ವಜರ ಕಾಲದಿಂದಲೂ ಪೌರಾಣಿಕ ದೇವಿ, ಸುಂಭ, ನೀಸುಬ್ಬಗಳಂತ ಕತೆ ಮತ್ತು ನಾಟಕಗಳು ಅರ್ಥಪೂರ್ಣವಾಗಿ ಆಡುತ್ತ ಈಗಿನ ಕಲಿಯುಗ ದಲ್ಲಿ ಮೊಬೈಲ್ ಗಳಲ್ಲಿ ಸಾಮಾಜಿಕ ಜಾಲತಾಣಗಳು ಹೆಚ್ಚು ಅಬ್ಬರದ ನಡುವೆ ಪೌರಾಣಿಕ ನಾಟಕಗಳು ಅಳಿವಿನಂಚಿನಲ್ಲಿದ್ದು ಇಂತಹ ಹೊತ್ತಿನಲ್ಲಿ ಬಾಗಲವಾಡ ಗ್ರಾಮ ದಲ್ಲಿ ಯುವಕರು ಮಗ ಹೋದರು ಮಾಂಗಲ್ಯ ಬೇಕು ಎಂಬ ಸುಂದರ ಸಾಮಾಜಿಕ ನಾಟಕ ಮತ್ತು ಪೌರಾಣಿಕ ನಾಟಕಗಳು ಆಡುತ್ತಿ ರುವದು ಶ್ಲಾಘನೀಯ ಕಾರ್ಯ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳು ಪ್ರತಿ ಗ್ರಾಮಗಳಲ್ಲಿ ಮುಂದು ವರಿಸಿದರೆ ಜೀವಂತ ಉಳಿವಿಗೆ ಸಾಕ್ಷಿ ಆಗುತ್ತದೆ ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ಯಾವುದೇ ವಿಷಯವಿದ್ದರೂ ನಾವು ಆವರ ಜೊತೆ ತನುಮನ ದನದಿಂದ ಸ್ಪಂದಿಸುತ್ತೇವೆ ಎಂದರು ನಂತರ ವಿವಿಧ ಪಕ್ಷದ ಮುಖಂಡರು ಮಾತನಾಡಿದರು ಆಇದೇ ಸಂದರ್ಭದಲ್ಲಿ ರಂಗ ಕವಿ ಆವರಿಂದ ನಾಟಕ ಪುಸ್ತಕ ಬಿಡುಗಡೆ ಮಾಡ ಲಾಯಿತು. ಈ ಸಂದರ್ಭದಲ್ಲಿ: ತಾಲೂಕ ಪಂಚಾಯತಿ ಮಾಜಿ ಸದಸ್ಯರಾದ ಹಡ್ಡಿ



3ನೇ ಪುಟಕ್ಕೆ

ಮಸ್ಕಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ: ಶಾಸಕ ಆರ್ ಬಸನಗೌಡ ತುರುವಿ ಹಾಳ



ಮಸ್ಕಿ : ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾ ಗದಂತೆ ಮುಂಜಾಗೃತಾ ಕ್ರಮಗಳ ನ್ನು ಕೈಗೊಳ್ಳಬೇಕು. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಮಸ್ಕಿ ಶಾಸಕ ಆರ್ ಬಸನಗೌಡ ತುರವಿಹಾಳ ಸೂಚನೆ ನೀಡಿದರು.

ಪಟ್ಟಣದ ತಾ ಪಂ ಸಭಾಂಗಣದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆ ಕುರಿತು ಹಮ್ಮಿ ಕೊಂಡಿದ್ದ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ

3ನೇ ಪುಟಕ್ಕೆ

ಪೂರ್ವ ಸಿದ್ದತಾ ಸಭೆ I ಪರೀಕ್ಷಾ ಕೊಠಡಿಯಲ್ಲಿ ಸಿಸಿಟಿವಿ ಕಣ್ಗಾವಲು

28 ರಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ : ಎಡಿಸಿ ತೇಲಿ



ಬಾಗಲಕೋಟೆ ,ಫೆ.18-

ಜಿಲ್ಲೆಯಾದ್ಯಂತ ಫೆಬ್ರವರಿ 28 ರಿಂದ ಮಾರ್ಚ 17 ವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರ ಜರುಗಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಒಟ್ಟು 27009 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಅದಕ್ಕಾಗಿ ಜಿಲ್ಲೆಯಾದ್ಯಂತ 165 ಕಾಲೇಜುಗಳಲ್ಲಿ ಒಟ್ಟು 39 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಹಿಸಿ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ದತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.


ಪರೀಕ್ಷಾ ಕೇಂದ್ರಕ್ಕೆ ನೇಮಕಗೊಂಡ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು, ಪ್ರಶ್ನೆ ಪತ್ರಿಕೆ ವಿತರಕರ ತಂಡ, ಸಿಟಿಂಗ್ ಸ್ಕ್ವಾಡ್, ಜಿಲ್ಲಾ ಜಾಗೃತ ದಳದವರು ತಮ್ಮ ತಮ್ಮ ಕರ್ತವ್ಯಗಳನ್ನು ಅರಿತು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗಳು ಇಲಾಖೆಯಿಂದ ನೀಡಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಬಳಸಬೇಕು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿ ಹೊರತುಪಡಿಸಿ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದರು.

ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆ ಆಯಾ ಪರೀಕ್ಷಾ ಕೇಂದ್ರಕ್ಕೆ ತಲುಪಿಸುವ ಕೆಲಸವಾಗಬೇಕು. ಪರೀಕ್ಷಾ ಕಾರ್ಯಕ್ಕೆ ನೀಡಲಾದ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಉತ್ತಮವಾದ ಡೆಸ್ಕ ವ್ಯವಸ್ಥೆ, ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಮಾಡಬೇಕು. ಪರೀಕ್ಷಾ ಕೇಂದ್ರದಲ್ಲಿ ಮಾಡಲಾದ ಆಸನಗಳ ವ್ಯವಸ್ಥೆ ಬಗ್ಗೆ ಸೂಚನಾ ಫಲಕದಲ್ಲಿ ಅಂಟಿಸಬೇಕು. ಪ್ರಶ್ನೆ ಪತ್ರಿಕೆ ಬಂಡಲ್ ತೆರೆಯುವಾಗ, ಉತ್ತರ ಪತ್ರಿಕೆ ಸ್ವೀಕರಿಸುವ, ಬಂಡಲ್ ಮಾಡುವುದು ಸೇರಿದಂತೆ ಇತರೆ ಪ್ರಕ್ರಿಯೆಗಳನ್ನು ಸಿಸಿಟಿವಿ ಕಣ್ಗಾವಲು ಮೂಲಕ ನಡೆಸಲು ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಇತರೆ ಅಧಿಕಾರಿಗಳು, ಸಿಬ್ಬಂದಿಗಳು, ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್, ಇ-ಕ್ಯಾಮರಾ, ಲ್ಯಾಪಟಾಪ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷೆಗಳನ್ನು ಸುಸೂತ್ರವಾಗಿ ಮತ್ತು ಲೋಪದೋಷಗಳಿಲ್ಲದೆ ಜರುಗಿಸಲು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್‌ಗಳವರೆಗೆ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಈ ಪ್ರದೇಶದಲ್ಲಿ ಪರೀಕ್ಷಾ ಅವಧಿಯಲ್ಲಿ ಝರಾಕ್ಸ ಅಂಗಡಿಗಳು ಇದ್ದಲ್ಲಿ ಮುಚ್ಚತಕ್ಕದ್ದೆಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ತಹಶೀಲ್ದಾರರಾದ ವಾಸುದೇವ ಸ್ವಾಮಿ, ವಿನೋದ ಹತ್ನಟ್ಟಿ, ಗಿರೀಶ ಸ್ವಾದಿ, ಡಾ.ಚಿಕ್ಕಪ್ಪ ಎಂ.ನಾಯಕ, ಅನೀಲ ಮೇತ್ರಿ, ಡಿವೈಎಸ್‌ಪಿ ಗಜಾನನ ಸುತಾರ ಸೇರಿದಂತೆ ಪರೀಕ್ಷಾ ಕೇಂದ್ರ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

ಸಾಹಿತ್ಯದಿಂದ ಸಾಮರಸ್ಯದ ಜೀವನ ಸಾಧ್ಯ : ಡಾ.ದಾಕ್ಷಾಯಣಿ ಎಸ್.ಅಪ್ಪಾ



ಕಲಬುರಗಿ,ಫೆ.18-

ನಾವು ರಚಿಸುವ ಸಾಹಿತ್ಯದಿಂದ ಸಾಮರಸ್ಯದ ಜೀವನ ರೂಪಿಸುವಂತಿರಬೇಕು ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಾತೋಶ್ರೀ ಡಾ.ದಾಕ್ಷಾಯಣಿ ಎಸ್.ಅಪ್ಪಾ ಅವರು ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಮುಡುಬಿ ಗುಂಡೇರಾವ ಅವರಿಗೆ ಕನ್ನಡ ಧ್ವಜ ಹಸ್ತಾಂತರ ಮಾಡಿ ಮಾತನಾಡಿದ ಅವರು, ನಾವು ಉಳಿಯಬೇಕಾದರೆ ಸಮಾಜ ಉಳಿಸಬೇಕು. ಅದಕ್ಕಾಗಿ ಬಸವಾದಿ ಶರಣರು ಸೌಹಾರ್ದತೆಯ ಬದುಕು ಕಟ್ಟಿಕೊಟ್ಟರು. ಇಂದು ಅಂಥ ಸೌಹಾರ್ದತೆಯ ಸಾಹಿತ್ಯ ಮತ್ತು ಕಲೆಗಳು ಅವಶ್ಯವಾಗಿವೆ ಎಂದರು.

ಸಾರಂಗಮಠದ ಶ್ರೀ ಡಾ. ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡಿ, ಕಲಬುರಗಿ ಜಿಲ್ಲಾ ಕಸಾಪ ರಾಜ್ಯಕ್ಕೆ ಮಾದರಿಯಾಗಿದೆ. ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಪರಂಪರೆ ಉಳಿಸಿ ಬೆಳೆಸುವಲ್ಲಿ ಎಲ್ಲರೂ ಮುಂದಾಗಬೇಕಿದೆ ಎಂದರು.

ಸಮ್ಮೇಳನಾಧ್ಯಕ್ಷರ ಬದುಕು ಬರಹದ ಕುರಿತು ನರಸಪ್ಪ ಚಿನ್ನಕಟ್ಟಿ ಮಾತನಾಡಿದರು. ಅನ್ನ ಅರಿವು ಅಕ್ಷರ ನೆರವು ಗೋಷ್ಠಿಯಲ್ಲಿ ಕೃಷಿಕ ಆದಿನಾಥ ಹೀರಾ, ಆರೋಗ್ಯದ ಕುರಿತು ಡಾ.ಶರಣಕುಮಾರ ಕಂಠಿ ಮಾತನಾಡಿದರು. ಜಗದೀಶ ಮರಪಳ್ಳಿ ಅಧ್ಯಕ್ಷತೆ ವಹಿಸಿದ್ದರು. ಮುಳುಗದಿರಲಿ ಬದುಕು ಗೋಷ್ಠಿಯಲ್ಲಿ ಡಾ.ಬಾಬುರಾವ ಶೇರಿಕಾರ, ಕಲ್ಯಾಣಕುಮಾರ ಶೀಲವಂತ ಉಪನ್ಯಾಸ ನೀಡಿದರು.

ಸಮ್ಮೇಳನದ ನಿರ್ಣಯಗಳು : ಕಲಬುರಗಿಯನ್ನು ರಾಜ್ಯದ ಉಪ ರಾಜಧಾನಿಯನ್ನಾಗಿ ಮಾಡುವುದು. ಕಲ್ಯಾಣ ಭಾಗದ ಸಮಸ್ಯೆ ಬಗೆಹರಿಸಲು ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಬೇಕು. ಹಂಪಿ ಉತ್ಸವದ ಮಾದರಿಯಂತೆ ರಾಷ್ಟ್ರಕೂಟ , ಕಲಬುರಗಿ ಉತ್ಸವಗಳನ್ನು ಆಚರಿಸಬೇಕು. ಕಲ್ಯಾಣ ನಾಡಿನ ಪ್ರಮುಖ ಐತಿಹಾಸಿಕ ಸ್ಥಳಗಳಾದ ನಾಗಾವಿ, ಮಳಖೇಡ, ಸನ್ನತಿ, ಬಜನಳ್ಳಿಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಣೆ ಮಾಡಿ ಅವುಗಳನ್ನು ಅಭಿವೃದ್ಧಿಪಡಿಸಬೇಕು. ಈ ಸ್ಥಳಗಳ ಮಹತ್ವವನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸರಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ಶಿಕ್ಷಕರನ್ನು ನೇಮಿಸಬೇಕು. ಆ ಮೂಲಕ ಕನ್ನಡ ಶಾಲೆಗಳನ್ನು ಉಳಿಸಬೇಕು. ಜಿಲ್ಲೆಯ ಸಿಮೆಂಟ್ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಬೇಕು. ಉದ್ಯೋಗ ಕಲ್ಪಿಸುವ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಜಿಲ್ಲೆಯ ಎರಡು ಕಡೆ ಸ್ಥಾಪಿಸಬೇಕು. ಕಲಬುರಗಿಯಲ್ಲಿ ಜವಳಿ ಪಾರ್ಕ್ ಶೀಘ್ರವೇ ಅನುಷ್ಠಾನಗೊಳಿಸಬೇಕು.

ಸಮಾರೋಪ ಸಮಾರಂಭ : ಕಡಗಂಚಿಯ ಶ್ರೀ ಶಾಂತಲಿಂಗೇಶ್ವರ ಮಠದ ಪೀಠಾಧಿಪತಿ ವೀರಭದ್ರ ಶಿವಾಚಾರ್ಯರು, ತಂದೆ-ತಾಯಿಗೆ ನೀಡುವ ಗೌರವ ನಾಡದೇವಿಗೂ ಸಲ್ಲಿಸಬೇಕು. ಭಾಷೆ ಮತ್ತು ಸಂಸ್ಕೃತಿ ನಮ್ಮ ಬದುಕಿನ ಜೀವನವಾಗಿವೆ. ನುಡಿ ಸೇವೆ ನಿರಂತರವಾಗಿ ನಡೆಯಲಿ ಎಂದು ಹಾರೈಸಿದರು.

ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ನೇತೃತ್ವ ವಹಿಸಿದ್ದರು. ಸಮ್ಮೇಳನಾಧ್ಯಕ್ಷ ಮುಡುಬಿ ಗುಂಡೇರಾವ, ಸೇವಂತಾ ಚವ್ಹಾಣ, ಕಲ್ಯಾಣಕುಮಾರ ಶೀಲವಂತ ವೇದಿಕೆ ಮೇಲಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸತ್ಕರಿಸಲಾಯಿತು. ಶಿವರಾಜ ಅಂಡಗಿ, ಧರ್ಮಣ್ಣ ಎಚ್.ಧನ್ನಿ, ಶರಣರಾಜ ಛಪ್ಪರಬಂದಿ, ಸೇರಿದಂತೆ ಸಾಹಿತ್ಯಾಸಕ್ತರು ಇದ್ದರು.

ಕಳ್ಳತನ ಆರೋಪಿಗಳ ಬಂಧನ ; 26 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ : ಡಾ.ಶರಣಪ್ಪ ಎಸ್.ಡಿ.



ಕಲಬುರಗಿ,ಫೆ.18-

ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಮತ್ತು ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೇರಿದಂತೆ ಇತರೆ ಕಡೆಗಳಲ್ಲಿ ದಾಖಲಾಗಿದ್ದ ಸುಲಿಗೆ ಹಾಗೂ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ಏಳು ಆರೋಪಿಗಳನ್ನು ಬಂಧಿಸಿ ಅವರಿಂದ ಚಿನ್ನಾಭರಣ, ವಾಹನಗಳು ಸೇರಿದಂತೆ ಒಟ್ಟಾರೆ 26.11 ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ಜಪ್ತಿ ಮಾಡಲಾಗಿದೆ.

ವಿಶ್ವವಿದ್ಯಾಲಯ ಠಾಣಾ ವ್ಯಾಪ್ತಿಯ ಮೊದಲ ಕಾರ್ಯಾಚರಣೆಯಲ್ಲಿ ಎಂ.ಎಸ್.ಕೆ ಮಿಲ್ ಜಿಲನಾಬಾದ್ ನಿವಾಸಿಗಳಾದ ಇಮ್ರಾನ್ ಶೇಖ್, ಮುಹಮ್ಮದ್ ಸಮೀರ್, ಮುಹಮ್ಮದ್ ಇಮ್ತಿಯಾಜ್ ಹಾಗೂ ರುಕ್ಮೋದ್ದಿನ ಬಾಬಾ ಎಂಬಾತರನ್ನು ವಶಕ್ಕೆ ಪಡೆದು ಅವರಿಂದ 12.25 ಲಕ್ಷ ರೂ. ಮೌಲ್ಯದ 40 ಗ್ರಾಂ ಚಿನ್ನ, ಒಂದು ಪಲ್ಸರ್ ಬೈಕ್ ಹಾಗೂ ಕ್ರಿಟಾ ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅದೇ ಠಾಣೆಯ ಮತ್ತೊಂದು ಮನೆಗಳ್ಳತನ ಪ್ರಕರಣದಲ್ಲಿ ಚುನ್ನಾಭಟ್ಟಿಯ ನಿವಾಸಿ ಮುಹಮ್ಮದ್ ಝಮೀರ್ ಬಸೀರಮಿಯಾ ಎಂಬಾತನನ್ನು ವಶಕ್ಕೆ ಪಡೆದು ಆತನಿಂದ 40 ಗ್ರಾಂ ಬಂಗಾರ, 40 ಗ್ರಾಂ ಬೆಳ್ಳಿಯ ಆಭರಣಗಳು ಹಾಗೂ 66 ಸಾವಿರ ರೂ. ನಗದು ಹೀಗೆ ಒಟ್ಟು 6.66 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಮಾಡಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದರು.

ಅಶೋಕ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದ ಸರಗಳ್ಳತನ ಪ್ರಕರಣದಲ್ಲಿ ಕೆಸರಟಗಿ ನಿವಾಸಿಗಳಾದ ಆಕಾಶ ಬಾಳಿ ಹಾಗೂ ನಾಗರಾಜ್ ಪಾಟೀಲ್ ಎಂಬಾತರನ್ನು ವಶಕ್ಕೆ ಪಡೆದು ಅವರಿಂದ 7.20 ಲಕ್ಷ ರೂ. ಮೌಲ್ಯದ ಚಿನ್ನದ ಸರ ಮತ್ತು ಪಲ್ಸರ್ ಎನ್.ಎಸ್ ಬೈಕ್ ಸೇರಿ ಒಟ್ಟು 26,11,000 ರೂ. ಮೌಲ್ಯದ ಮಾಲು ಅನ್ನು ಜಪ್ತಿ ಮಾಡಲಾಗಿದೆ ಎಂದು ವಿವರಿಸಿದರು.

ವಿಳಾಸ ಕೇಳುವ ನೆಪದಲ್ಲಿ ಸರಗಳ್ಳತನ :

ಅಶೋಕ ನಗರದ ದತ್ತ ನಗರದ ನಿವಾಸಿ ಕೀರ್ತಮ್ಮ ಎಂಬ ವೃದ್ದೆ ತರಕಾರಿ ತರಲು ಹೋದಾಗ, ಬೈಕ್ ಮೇಲೆ ಬಂದ ಇಬ್ಬರು ಅಪರಿಚಿತರು ಡಾಕ್ಟರ್ ಶ್ರೀನಿವಾಸ ಅವರ ಮನೆ ಎಲ್ಲಿದೆ? ಎಂದು ವಿಳಾಸ ಕೇಳುವ ನೆಪ ಮಾಡಿದ್ದರು. ಮೊಬೈಲ್‌ನಲ್ಲಿ ಫೋಟೋ ತೋರಿಸುವ ಸೋಗಿನಲ್ಲಿ ವೃದ್ಧೆಯ ಕೊರಳಲ್ಲಿದ್ದ 38 ಗ್ರಾಂ ಚಿನ್ನದ ಸರವನ್ನು ಕಿತ್ತು ಪರಾರಿಯಾಗಿದ್ದರು. ಈ ಸಂಬಂಧ ತನಿಖೆ ನಡೆಸಿದ ಅಶೋಕ ನಗರ ಪೊಲೀಸರು ಕೆಸರಟಗಿ ನಿವಾಸಿಗಳಾದ ಆಕಾಶ ಮತ್ತು ನಾಗರಾಜ ಎಂಬ ಇಬ್ಬರು ಯುವಕರನ್ನು ಬಂಧಿಸಿ, ಅವರಿಂದ 7.20 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ ಎಂದರು.

ಅಂತರರಾಜ್ಯ ಸುಲಿಗೆಕೋರರ ಮೇಲೆ 'ಕೋಕಾ' ಪ್ರಯೋಗ:

ಬಂಧಿತ ಆರೋಪಿಗಳಾದ ಇಮ್ರಾನ್ ಶೇಖ್ (12 ಪ್ರಕರಣ), ಇಮ್ತಿಯಾಜ್ (13), ಸಮೀರ್ (11) ಹಾಗೂ ರುಕ್ಕೋದ್ದಿನ್ ಮೇಲೆ ಕರ್ನಾಟಕ ಹಾಗೂ ತೆಲಂಗಾಣದ ಜಹೀರಾಬಾದ್ ಸೇರಿದಂತೆ ವಿವಿಧೆಡೆ ಹತ್ತಾರು ದರೋಡೆ ಪ್ರಕರಣಗಳಿವೆ. ಈ ಗ್ಯಾಂಗ್ ಸಿಸಿಟಿವಿ ಇಲ್ಲದ ಕಡೆಗಳಲ್ಲೇ ಕೃತ್ಯವೆಸಗುತ್ತಿತ್ತು. ಅಂತರರಾಜ್ಯ ಗ್ಯಾಂಗ್‌ನ ಸರಣಿ ಅಪರಾಧಗಳನ್ನು ಪರಿಗಣಿಸಿ, ಇವರ ಮೇಲೆ ಕಠಿಣ 'ಕೋಕಾ' ಕಾಯ್ದೆ ಅಳವಡಿಸಲು ಕಲಬುರಗಿ ಪೊಲೀಸರು ನಿರ್ಧರಿಸಿದ್ದಾರೆ.

ಪೊಲೀಸ್ ತಂಡಕ್ಕೆ ಶ್ಲಾಘನೆ :

ಕಲಬುರಗಿ ನಗರದ ವಿಶ್ವವಿದ್ಯಾಲಯ ಮತ್ತು ಅಶೋಕ ನಗರ ಠಾಣೆಯ ಜಂಟಿ ಕಾರ್ಯಾಚರಣೆಯಲ್ಲಿ ಕುಖ್ಯಾತ ಸುಲಿಗೆಕೋರರನ್ನು ಬಂಧಿಸಿದ ಡಿಸಿಪಿ ಪ್ರವೀಣ ನಾಯಕ್, ಎಸಿಪಿಗಳಾದ ಬಸವೇಶ್ವರ ಹೀರಾ, ಶರಣಬಸಪ್ಪ ಸುಬೇದಾರ ಮಾರ್ಗದರ್ಶನದಲ್ಲಿ ಪಿ.ಐ ಚಂದ್ರಶೇಖರ ತಿಗಡಿ ಹಾಗೂ ಸತೀಶ್ ಕಣಿಮೇಶ್ವರ್ ನೇತೃತ್ವದ ತಂಡ ಈ ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಎಎ??? ಸೈಯದ್ ಗೌಸ್ ಸೇರಿದಂತೆ ಇತರೆ ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿದ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಪ್ರಶಂಸನಾ ಪತ್ರ ವಿತರಿಸಿದರು.



ಜಾತ್ರಾ ಮಹೋತ್ಸವದ ಅಂಗವಾಗಿ 21 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮ

ಕುಕನೂರು ,ಫೆ.18-

ತಾಲೂಕಿನ ಕುದುರೆಮೋತಿ ಗ್ರಾಮದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ 21 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿಜಯ ಮಹಾಂತ ಮಹಾಸ್ವಾಮಿ ಅವರು, ಪರಸ್ಪರ ಸೌಹಾರ್ದ, ಸಹಿಷ್ಣುತೆ ಮತ್ತು ಹೊಂದಾಣಿಕೆಯಿಂದ ಬದುಕುವುದೇ ನಿಜವಾದ ಭಾವೈಕ್ಯತೆ ಎಂದು ಹೇಳಿದರು.

ಜಾತಿ-ಧರ್ಮ ಬೇಧವಿಲ್ಲದೆ ಗ್ರಾಮದಲ್ಲಿ ಎಲ್ಲರೂ ಸಹೋದರತ್ವದಿಂದ ಜೀವನ ನಡೆಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿ.ಪಂ. ಮಾಜಿ ಸದಸ್ಯ ಈರಪ್ಪ ಕುಡುಗುಂಟಿ ಮಾತನಾಡಿ, ವೀರಶೈವ ಮಠಗಳು ಸಮಾಜದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಕಾಪಾಳಿಗಳು. ಅವುಗಳ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕಳಕಪ್ಪ ಕಂಬಳಿ ಅವರು, ದಾಂಪತ್ಯದಲ್ಲಿ ಸಮಾನತೆ ಮತ್ತು ಹೊಂದಾಣಿಕೆ ಮುಖ್ಯವೆಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಮಹಾದೇವ ಮಹಾಸ್ವಾಮಿಗಳು, ಬಸವಲಿಂಗ ಶಿವಾಚಾರ್ಯರು, ಗುರು ಸಿದ್ದೇಶ್ವರ ಶಿವಾಚಾರ್ಯರು, ಗುರು ಶಾಂತವೀರ ಶಿವಾಚಾರ್ಯರು ಹಾಗೂ ಹಜರತ್ ನಿಜಾಮುದ್ದೀನ್ ದರ್ಗಾದ ಅಶ್ರಫ್ ಗುರುಗಳು ದಿವ್ಯ ಸಾನಿಧ್ಯವಹಿಸಿದ್ದರು. ಶ್ರೀನಾಥ ರೆಡ್ಡಿ, ಮಲ್ಲನಗೌಡ ಕೋನನಗೌಡ್ರು, ಅಶೋಕ ತೋಟದ, ಬಸವರಾಜ ರಾಜೂರ, ಅಯ್ಯನಗೌಡ ಕೆಂಚಮ್ಮನವರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕಲಬುರಗಿಯಲ್ಲಿ ಕಣ್ಮನ ಸೆಳೆದ ಕಲ್ಯಾಣ ಕರ್ನಾಟಕ ಚಿತ್ರಸಂತೆ

ಕಲಾವಿದರ ಕೃತಿಗಳು ವಿಶ್ವದೆಲ್ಲೆಡೆ ತಲುಪಲಿ: ಡಾ.ದಾಕ್ಷಾಯಣಿ ಅಪ್ಪಾ

ಕಲಬುರಗಿ,ಫೆ.18-

ಸೃಜನಶೀಲತೆಯಲ್ಲಿ ಅಪಾರ ಪ್ರತಿಭೆಯನ್ನು ಹೊಂದಿರುವ ಕಲಬುರಗಿ ಕಲಾವಿದರ ಕೃತಿಗಳು ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಬೇಕು ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಡಾ.ದಾಕ್ಷಾಯಣಿ ಎಸ್.ಅಪ್ಪಾ ಅವರು ಹೇಳಿದರು.

ನಗರದ ಮಹಬೂಬ್ ಗುಲ್ಶನ್ ಗಾರ್ಡನ್ ಆವರಣದಲ್ಲಿರುವ ಟೌನ್ ಹಾಲ್ ಸಂಕೀರ್ಣದಲ್ಲಿ ಡೆಕ್ಕನ್ ಆರ್ಟ್ ಸೊಸೈಟಿ ಸೇರಿದಂತೆ ಹಲವು ಕಲಾ ಸಂಸ್ಥೆಗಳ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಮೊದಲ ಕಲ್ಯಾಣ ಕರ್ನಾಟಕ ಚಿತ್ರಸಂತೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲಬುರಗಿ ನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ ಮಾತನಾಡಿ, ಇಂತಹ ಕಾರ್ಯಕ್ರಮಗಳು ಕಲಬುರಗಿಯಲ್ಲಿ ಹಮ್ಮಿಕೊಳ್ಳುತ್ತಿರುವುದು ಸಂತಸ. ಮುಂದಿನ ಬಾರಿ ಇಂತಹ ಕಾರ್ಯಕ್ರಮಗಳಿಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳಿಗೆ ಪಾಲಿಕೆ ಸಂಪೂರ್ಣ ಸಹಕಾರ ನೀಡುತ್ತದೆ ಭರವಸೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೇವೇಂದ್ರ ಟೋಟ್ನಳ್ಳಿ ಮಾತನಾಡಿದರು.

ಆಯೋಜಕರಾದ ಶಾಹೇದ್ ಪಾಷಾ, ಡಾ.ಸುಬ್ಬಯ್ಯ ನೀಲಾ, ರಾಜಶೇಖರ ಶಾಮಣ್ಣ, ಡಾ.ಬಸವರಾಜ್ ಕಲೆಗಾರ್, ಮೊಹಮ್ಮದ್ ಆಯಾಜುದ್ದೀನ್ ಪಟೇಲ್, ಡಾ.ರೆಹಮಾನ್ ಪಟೇಲ್, ಶರಣು ಪಟ್ಟಣಶೆಟ್ಟಿ, ನಾರಾಯಣ ಜೋಶಿ ಸೇರಿದಂತೆ ಹಲವರು ವೇದಿಕೆಯನ್ನು ಹಂಚಿಕೊಂಡರು.

ಶರಣಬಸವ ವಿಶ್ವವಿದ್ಯಾಲಯದ ದೃಶ್ಯಕಲಾ ವಿದ್ಯಾರ್ಥಿಗಳು, ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಅಂಡ್ ಕಲ್ಚರ್ ಹಾಗೂ ಎಂಎಂಕೆ ದೃಶ್ಯಕಲಾ ಕಾಲೇಜಿನ ವಿದ್ಯಾರ್ಥಿಗಳ ಕಲಾಕೃತಿಗಳು ಜನರ ಗಮನ ಸೆಳೆದವು.

ಚಿತ್ರಸಂತೆಯಲ್ಲಿ ಒಂದನೆಯ ತರಗತಿಯಿಂದ 12ನೆಯ ತರಗತಿ ವರೆಗಿನ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ರಾಯಚೂರು, ಯಾದಗಿರಿ ಕಲಬುರಗಿ ಮತ್ತು ಬೀದರ್ ಕಡೆಗಳಿಂದ ಹಲವರು ಕಲಾವಿದರಿಂದ 1 ಸಾವಿರಕ್ಕೂ ಹೆಚ್ಚು ಕಲಾಕೃತಿಗಳು ಪ್ರದರ್ಶನದಲ್ಲಿ ಗಮನ ಸೆಳೆದವು. ಮಕ್ಕಳ ಆಕರ್ಷಣೆಗೆ ಒಂಟೆ, ಕುದುರೆಗಳ ಸವಾರಿ ವ್ಯವಸ್ಥೆಯೂ ಮಾಡಲಾಗಿತ್ತು.

ಗ್ಯಾರಂಟಿ ಯೋಜನೆಯಿಂದ ಮಹಿಳೆಯರ ಜೀವನ ಗುಣಮಟ್ಟ ಸುಧಾರಣೆ: ಸಚಿವ ಶಿವರಾಜ್ ಎಸ್.ತಂಗಡಗಿ



ಕೊಪ್ಪಳ , ಫೆ.18-

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಐದು ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಹೆಣ್ಣುಮಕ್ಕಳು ಸ್ವಾಭಿಮಾನದಿಂದ ಬದುಕು ಸಾಗಿಸಲು ಸಾಧ್ಯವಾಗಿದ್ದು, ಅವರ ಜೀವನದ ಗುಣಮಟ್ಟ ಸುಧಾರಿಸಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ಅಭಿಪ್ರಾಯಪಟ್ಟರು.

ನಗರದ ಮಧುಶ್ರೀ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಗ್ಯಾರಂಟಿ ಕಾರ್ಯಾಗಾರ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಪ್ರತಿಯೊಂದು ಮನೆಯಲ್ಲೂ ನೆಮ್ಮದಿ ವಾತಾವರಣ ನಿರ್ಮಾಣವಾಗಿದ್ದರೆ, ಅದು ಗ್ಯಾರಂಟಿ ಯೋಜನೆಯಿಂದ ಮಾತ್ರ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನಮ್ಮ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಯಿಂದ ಬಿಜೆಪಿಯವರಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಯೋಜನೆ ಹೀಗೆ ಮುಂದುವರೆದರೆ ರಾಜ್ಯದಲ್ಲಿ ಅವರಿಗೆ ಭವಿಷ್ಯವಿಲ್ಲ ಎಂದು ಗೊತ್ತು. ಹೀಗಾಗಿ ಗ್ಯಾರಂಟಿ ಯೋಜನೆಯಿಂದ ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂದು ಇಲ್ಲ- ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿಗೆ ವೋಟ್ ನೀಡಿದ ಮಹಿಳೆಯರಿಗೂ ಗ್ಯಾರಂಟಿ : ನಮಗೆ ರಾಜ್ಯದ ಹೆಣ್ಣು ಮಕ್ಕಳ ಮೇಲೆ ನಂಬಿಕೆ ಮತ್ತು ವಿಶ್ವಾಸ ಹೆಚ್ಚಿದೆ. ನಾವು ಕಾಂಗ್ರೆಸ್ ಗೆ ಮತ ನೀಡಿದವರಿಗೆ ಮಾತ್ರ ಗ್ಯಾರಂಟಿ ಯೋಜನೆ ಕೊಟ್ಟಿದ್ದೆವೆಯೇ? ಬಿಜೆಪಿಗೆ ಮತ ಹಾಕಿದವರಿಗೂ ಗ್ಯಾರಂಟಿ ಯೋಜನೆ ತಲುಪಿದೆಯಲ್ಲ. ಈ ಬಗ್ಗೆ ನೀವು ಕೂಡ ನಿಮ್ಮ ನೆರೆ ಹೊರೆಯವರಿಗೆ ಜಾಗೃತಿ ಮೂಡಿಸಬೇಕು ಎಂದರು.

ಬಿಜೆಪಿಗರು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನ, ಬ್ಯಾಂಕ್ ನಲ್ಲಿ ಶೂನ್ಯ ಖಾತೆ ತೆಗೆಯಿರಿ, ಪ್ರತಿ ಮಹಿಳೆಯರ ಖಾತೆಗೆ ತಲಾ ಹದಿನೈದು ಲಕ್ಷ ರೂ. ಹಣ ಹಾಕುತ್ತೇವೆ ಎಂದು ಭರವಸೆ ನೀಡಿದ್ದರು. ಮಹಿಳೆಯರು ಮುಗಿಬಿದ್ದು, ಖಾತೆ ತೆರೆದರು. ಆದರೆ ಕೇಂದ್ರ ಸರ್ಕಾರದಿಂದ ಮಹಿಳೆಯರ ಖಾತೆಗೆ ಹಣ ಬರಲಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಮಹಿಳೆಯರ ಖಾತೆಗೆ ಹಣ ಹಾಕುವ ಕೆಲಸ ಮಾಡುತ್ತಿದೆ ಎಂದರು.

ಬಿಜೆಪಿಯಿಂದ ಯೋಜನೆಗೆ ಕುತ್ತು :

ಗ್ಯಾರಂಟಿ ಯೋಜನೆಯಿಂದ ಮಹಿಳೆಯರ ಜೀವನ ಗುಣಮಟ್ಟ ಸುಧಾರಣೆ ಮಾಡಿದೆ. ಬಿಜೆಪಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಗ್ಯಾರಂಟಿ ಯೋಜನೆಗೆ ಕುತ್ತು ಬರಲಿದೆ. ಕಾಂಗ್ರೆಸ್ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಿಮ್ಮ ಖಾತೆಗೆ ಹಣ ಬರುವುದು ಮುಂದುವರೆಯಲಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ್ದು ಎಲ್ಲವೂ ಹಣ ವ್ಯಯಿಸದ ಯೋಜನೆಗಳಾಗಿವೆ. ಸ್ವಚ್ಛ ಭಾರತ ಯೋಜನೆ, ಪೊರಕೆಯೂ ನಮ್ಮದೆ, ಕಸವೂ ನಮ್ಮದೆ, ಕಸ ಬಳಿಯುವವರು ಕೂಡ ನಾವೇ. ಯೋಜನೆ ಮಾತ್ರ ಕೇಂದ್ರದ್ದು. ಇನ್ನು ಬೇಟಿ ಬಚಾವೋ-ಬೇಟಿ ಪಡಾವೋ ಯೋಜನೆ ಬಗ್ಗೆ ಪ್ರತಿಕ್ರಿಯಿಸಿ, ಮಕ್ಕಳು ನಮ್ಮದ್ದು, ಯೋಜನೆ ಮಾತ್ರ ಅವರದ್ದು ಎಂದು ವ್ಯಂಗ್ಯವಾಡಿದರು.

ಬಿಜೆಪಿಯವರಿಗೆ ಬಡವರು ನೆಮ್ಮದಿಯಾಗಿ ಬದುಕುವುದು ಇಷ್ಟವಿಲ್ಲ. ಹೀಗಾಗಿ ಯುಪಿಎ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿಯ ಯೋಜನೆಯ ಹೆಸರು ಬದಲಾಯಿಸಿ, ಕಾಯ್ದೆಗೆ ತಿದ್ದುಪಡಿ ತಂದಿದ್ದಾರೆ. ಅವರು ಯೋಜನೆಗಳನ್ನು ನೀಡುವುದು ಕೇವಲ ಉಳ್ಳವರಿಗೆ ಮಾತ್ರ. ಅವರ ಕಣ್ಣಿಗೆ ಕಾಣುವುದು ಕೇವಲ ಅಂಬಾನಿ, ಅದಾನಿ ಮಾತ್ರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಮೆಹರೋಜ್ ಖಾನ್, ಸಂಸದ ರಾಜಶೇಖರ್ ಹಿಟ್ನಾಳ್, ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್, ಉಪಾಧ್ಯಕ್ಷ ಮಹರೋಜ್ ಖಾನ್, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್, ಸಿಇಓ ವರ್ಣಿತ್ ನೇಗಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕೆ.ಆರ್.ಎಸ್. ಭ್ರಷ್ಟಾಚಾರ ವಿರುದ್ಧ ಹೋರಾಟ ಬಸವರಾಜ ಅಮಿನಗಡ

ಗಂಭೀರವಾಗಿ ಪರಗಣಿಸಬೇಕು ಎಂದು ಆಗ್ರಹಿಸಿದರು.

ಮೋಹನ ಗೋಸ್ಲೆ ಡಿ:24/2042ರಂದು ತಾವೇ ಡಾ.ಉಮಾ ಮಹೇಶ್ವರಿ ಅವರು 11000ಸಾವಿರ ಲಂಚ ಪಡೆಯುತ್ತಾರೆ ಎಂದು ಆರೋಪಿಸಿದ್ದರು ಆಸ್ಪತ್ರೆಯ ಮುಂಬಾಗ ಧರಣಿನಡೆಸಿದ್ದರು ಎಂದು ಪತ್ರಿಕೆಯಲ್ಲಿ ನಾವು ಗಮನಿಸಿದ್ದೆವೆ.ಆದ್ರೆ ಇಂದು ಅವರ ಹೇಳಿಕೆ ತದ್ವಿರುದ್ಧವಾಗಿದೆ ಇದಕ್ಕೆ ಅವರೆ ಸ್ಪಷ್ಟನೆ ನೀಡಬೇಕು ಎಂದರು,ನಾನು ಸಹ ಒಬ್ಬ ದಲಿತನೆ ಡಾ.ಉಮಾಮಹೇಶ್ವರಿ ಅವರು ದಲಿತರು ಆಗಿರಬಹುದು ಆದರೆ ಅವರು ಒಬ್ಬ ವೈದ್ಯರು ಎಂಬುವದು ನೆನಪಿರಲಿ ಅದೆ ದಲಿತ ಮಹಿಳೆಯಿಂದಲೆ ದುಡ್ಡುಪಡೆದಿದ್ದಾರೆ ನಾವು ದಲಿತರು ದಲಿತ ಮಹಿಳೆಯ ದ್ವೇಷ ರಾಜಕಾರಣ,ಜಾತಿ ರಾಜಕಾರಣ ಬಿಡಬೇಕು ನಮ್ಮದು ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದರು.ಮುಖ್ಯಾಧಿಕಾರಿಳು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಇದೆ ಸಂದರ್ಭದಲ್ಲಿ ಶಿವು ಹಾಲಬಾವಿ,ಅಭಿಷೇಕ್, ಮೌನೇಶ,ಮದು ಕಿಲ್ಲರಟ್ಟಿ ಉಪಸ್ಥಿತರಿದ್ದರು.

ತೆರವು ಮಾಡಿದ ಅಂಬೇಡ್ಕರ್ ನಾಮಫಲಕ ಘನತೆಯಿಂದ ಮರು ಸ್ಥಾಪಿಸಿ: ದಲಿತಪರ ಸಂಘಟನೆಗಳ ಒಕ್ಕೂಟ ಆಗ್ರಹ

ಒಕ್ಕೂಟದ ಸದಸ್ಯರು ಪತ್ರಿಕಾಗೋ ಷ್ಠಿಯಲ್ಲಿ ತಿಳಿಸಿದರು.

ಅಂದು ನಡೆಯುವ ಹೋರಾಟಕ್ಕೆ ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಎಲ್ಲಾ ಸಮುದಾಯದ ಹೋರಾಟಗಾರರು ದಲಿತ ಪರ ಸಂಘಟನೆಗಳು ಅಂಬೇಡ್ಕರ್ ಅನುಯಾಯಿಗಳು ಮುಖಂಡರು ವಕೀಲರು ಜನಪ್ರತಿನಿ ದಿನಗಳು ಜನಸಾಮಾ ನ್ಯರು ಭಾವಹಿಸಿ ಧರಣಿಯನ್ನು ಯಶ ಸ್ಸು ಗೊಳಿಸಬೇಕೆಂದು ಈ ಮೂಲಕ ತಿಲಿಸುತ್ತೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ವಕೀಲಾರದ ಪಿ. ತಿಪ್ಪಣ್ಣ ಬಾಗಲ ವಾಡ,ಯಲ್ಲಪ್ಪ ಹಿರೇಬಾದರದಿನ್ನಿ, ಪ್ರಭುರಾಜ್ ಕೊಡ್ಲಿ, ಬುಡ್ಡಪ್ಪ ನಾಯಕ ಮಲ್ಲಿನ ಮಡುಗು, ಶಿವರಾಜ್ ಜಾನೇಕಲ್, ಶಿವರಾಜ್ ಉಮಳಿ ಹೊಸೂ ರು,ಬಸವರಾಜ್ ಭಜಂತ್ರಿ, ಏಸಪ್ಪ ಪೋತ್ನಾಳ,ನರಸಪ್ಪ ಜೂಕೂರು, ಹನುಮಂತಪ್ಪ ಸೀಕಲ್, ಚಂದ್ರು ಲಕ್ಷ್ಮಣ ಜಾನೇಕಲ್ ಬಸವರಾಜ್ ಪೋತ್ನಾಳ ಅಮರೇಶ್ ಹಿರೇಬಾ ದರದಿನ್ನಿ ಸೇರಿದಂತೆ ಇನ್ನಿತರಿದ್ದರು.

ಬಾಗಲವಾಡ; ಮಗ ಹೋದರು ಮಾಂಗಲ್ಯ ಬೇಕು ನಾಟಕ ಅಯ್ಯಣ್ಣ ತಾತ ಗಲಗ ಶ್ರೀಗಳಿಂದ ಉದ್ಘಾಟನೆ

ಕರಿಯಪ್ಪ ಕವಿತಾಳ ಮಾಜಿ ತಾಲೂಕ ಪಂಚಾಯತ್ ಸದಸ್ಯರಾದ ಯಮ ನಪ್ಪ ಯಾದವ್ ವಿ ಎಸ್ ಎಸ್ ಎನ್ ಅಧ್ಯಕ್ಷರು ಮಲ್ಲನಗೌಡ ಪೊಲೀಸ್ ಪಾಟೀಲ್ ಅಮರೇಶ್ ಚಂದ್ರ ರೆಡ್ಡಿ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಅಮರೇ ಶ್ ಕಾವಲಿ ಪಿ ವೆಂಕಟೇಶ್ ಉಪನ್ಯಾಸಕರು ಕವಿಗಳು ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಬಸವರಾಜ್ ದ್ಯಾವಣ್ಣ ವರ್ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು ಶರಣಪ್ಪ ನಕ್ಕುಂದಿ ಮಾಜಿ ತಾಲೂಕ ಪಂಚಾಯಿತಿ ಅಧ್ಯಕ್ಷರ ಗುರಪ್ಪ ಚಂದ್ರಡ್ಡಿ ಗ್ರಾಮ ಪಂಚಾಯತ್ ಸದಸ್ಯರುಗಳಾದ ಮೈಬೂಬ್ ಸಾಬ್ ಅಂಬರೀಶ್ ದೇಸಾಯಿ ಸಹೋದರ ಚಂದ್ರಮಪ್ಪ ದೊರೆ ಸೈದಾಪುರ್ ಪತ್ರಕರ್ತರಾದ ವೀರೇಶ್ ಚಾಗಿ ಎಲ್ಲನಗೌಡ ಮರಾಠ ಪಾತ್ರಧಾ ರಿಗಳಾದ ಶಂಕ್ರಯ್ಯ ಸ್ವಾಮಿ ಹೋಟೆ ಲ್, ಸೂಗಪ್ಪ ಅಂಗಡಿ ಎಲ್ಲಪ್ಪ ಕಸನದೊಡ್ಡಿ ಚನ್ನಮಲ್ಲು ರವಿ ಹೊತ್ತೂರ್ ರಮೇಶ್ ಗಟ್ಟೂರ್ ವಿವಿಧ ಪಕ್ಷದ ಮುಖಂಡರು ಹಿರಿಯರು ಯುವಕರು ಗ್ರಾಮ ಸ್ಥರು ಉಪಸ್ಥಿತರಿದ್ದರು.

ಮಸ್ಕಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ: ಶಾಸಕ ಆರ್ ಬಸನಗೌಡ ತುರುವಿ ಹಾಳ

ಅಧ್ಯಕ್ಷತೆ ವಹಿಸಿ ಅವರು ಮಾತನಾ ಡಿದರು.ಗ್ರಾಮೀಣ ಭಾಗದಲ್ಲಿ ಏಪ್ರಿಲ್ ತಿಂಗಳ ಅಂತ್ಯದವರೆಗೂ ನೀರಿನ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇ ಕು. ಸಂಬಂಧಪಟ್ಟ ಅಧಿಕಾರಿಗಳು, ಬೋರ್‌ವೆಲ್‌ಗಳ ನೀರಿನ ಮಟ್ಟ ಪರಿಶೀಲಿಸಬೇಕು. ನೀರಿನ ಮಿತಬಳಕೆ ಹಾಗೂ ಕಾಯ್ದಿ ಟ್ಟುಕೊಳ್ಳುವುದಕ್ಕೆ ಒತ್ತು ನೀಡಬೇ ಕು,ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರು ಸರಬರಾ ಜು ಮಾಡಲು ಅಧಿಕಾರಿಗಳು ಸಮರ್ಥ ವಾಗಿ ಕೆಲಸ ನಿರ್ವಹಿಸಬೇಕು. ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಕಲುಷಿತ ನೀರು ಪೂರೈಕೆಯಾದರೆ, ತಕ್ಷಣ ಸಮಸ್ಯೆಯನ್ನು ಸರಿಪಡಿಸಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಿ ಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳಿ.

ಅಶುದ್ಧ ನೀರಿನ ಪೂರೈಕೆ ಬಗ್ಗೆ ದೂರುಗಳು ಬಂದಲ್ಲಿ ಅಥವಾ ನಿರ್ಲಕ್ಷ್ಯ ವಹಿಸಿದರೆ ಪಿ.ಡಿ.ಒ ಗಳನ್ನು ಹೊಣೆಗಾರರನ್ನಾಗಿ ಮಾಡಲಾ ಗುತ್ತದೆ ಎಂದು ಅವರು ಸೂಚಿಸಿ ದರು. ಜಲಜೀವನ್ ಮಿಷನ್ ಕಾಮಗಾರಿ ಪ್ರಗತಿ ಪರಿಶೀಲಿಸಿ, ಶೀಘ್ರದಲ್ಲಿ ಕೆಲಸ ಪೂರ್ಣ ಗೊಳಿಸಬೇಕು ಎಂದು ಸೂಚಿಸಿದರು. ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಗಳನ್ನು ಪ್ರತಿ ತಿಂಗಳು ನಡೆಸಬೇಕು. ತಾಲೂಕಿನ ಎಲ್ಲ ಗ್ರಾಮಗಳಲ್ಲಿನ ನೀರಿನ ಟ್ಯಾಂಕ್ಗಳನ್ನು ಶುಚಿಗೊಳಿ ಸಬೇಕು. ಪ್ರತಿಯೊಂದು ಕುಡಿಯು ವ ನೀರಿನ ಮೂಲಗಳಿಂದ ಕಡ್ಡಾಯ ವಾಗಿ ನೀರಿನ ಮಾದರಿ ಗಳನ್ನು ಪರೀಕ್ಷೆ ಮಾಡಿಸಬೇ ಕು,ನಿಷ್ಕಾಳಜಿ ತೋರಿ ದರೆ ತಪ್ಪಿತಸ್ಥರ ವಿರುದ್ಧ ಯಾವುದೇ ಮುಲ್ಲಾಜಿ ಲ್ಲದೇ ಕ್ರಮ ಕೈಗೊಳ್ಳಲಾಗು ವುದು. ಕುಡಿಯುವ ನೀರಿನ ಪೈಪ್‌ಲೈನ್‌ಗೆ ವಿದ್ಯುತ್ ಸಂಪರ್ಕ ನೀಡಬೇಕು ಇಲ್ಲವಾದರೆ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ ಎಂದು ಅವರಿಗೆ ತಿಳಿಸಿದರು.

ಕುರುಗೋಡು ಉತ್ಸವಕ್ಕೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿದ್ಯುಕ್ತ ಚಾಲನೆ

ಉತ್ಸವಗಳಿಂದ ನಾಡಿನ ಕಲೆ- ಸಂಸ್ಕೃತಿಯ ಬೆಳಕು ಚೆಲ್ಲುವ ಕಾರ್ಯ





ಬಳ್ಳಾರಿ,ಫೆ.18

ರಾಜ್ಯದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಎಲ್ಲಾ ಉತ್ಸವಗಳ ಮೂಲಕ ನಾಡಿನ ಕಲೆ- ಸಂಸ್ಕೃತಿಗೆ ಪ್ರೋತ್ಸಾಹಿಸುವ ಕೆಲಸ, ಬೆಳಕು ಚೆಲ್ಲುವ ಕಾರ್ಯ ನಮ್ಮ ಸರ್ಕಾರ ಮಾಡುತ್ತಿದೆ ಎಂದು ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಕಂಪ್ಲಿ ರಸ್ತೆಯ ಶ್ರೀ ಖಾದರ್‌ಲಿಂಗ ದರ್ಗಾ ಹತ್ತಿರದ ಶ್ರೀ ದೊಡ್ಡ ಬಸವೇಶ್ವರ ವೇದಿಕೆಯಲ್ಲಿ ಆಯೋಜಿಸಲಾದ ಕುರುಗೋಡು ಉತ್ಸವಕ್ಕೆ ಸೋಮವಾರ ವಿದ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ನಾಡಿನ ಪ್ರಮುಖ ಉತ್ಸವಗಳಾದ ಹಂಪಿ ಉತ್ಸವ, ಕಿತ್ತೂರು ಉತ್ಸವ, ಸಂಗೊಳ್ಳಿ ರಾಯಣ್ಣ ಉತ್ಸವ, ಲಕ್ಕುಂಡಿ ಉತ್ಸವ ಮತ್ತು ಮೈಸೂರು ದಸರಾ ಮಹೋತ್ಸವದಂತೆ ಪ್ರಾಚೀನ ಐತಿಹ್ಯ ಹೊಂದಿರುವ ಈ ಭಾಗದ ಕುರುಗೋಡು- ಕಂಪ್ಲಿ ಉತ್ಸವಗಳು ಇತಿಹಾಸದ ಪುಟ ಸೇರಲಿ ಎಂದು ಆಶಿಸಿದರು.

ಕುರುಗೋಡು- ಕಂಪ್ಲಿ ಕ್ಷೇತ್ರಗಳಲ್ಲಿ ಹಲವಾರು ರೀತಿಯ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇನ್ನಷ್ಟು ಕೆಲಸ ಮಾಡುವ ಅವಕಾಶ ಜನತೆ ನೀಡಬೇಕು ಎಂದರು.

ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್ ಅವರು ಮಾತನಾಡಿ, ಹಂಪಿಯಂತೆ ಕುರುಗೋಡು- ಕಂಪ್ಲಿ ಸ್ಥಳಗಳು ಐತಿಹಾಸಿಕ ಮಹತ್ವದ ಕುರುಹು ನೆಲೆ ಹೊಂದಿವೆ. ಈ ಸ್ಥಳಗಳ ಐತಿಹಾಸಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಕಾರ್ಯ ಉತ್ಸವಗಳ ಮೂಲಕ ಮಾಡಲಾಗುತ್ತಿದೆ ಎಂದು ಹೇಳಿದರು.

ಬಹುದಿನಗಳ ಬೇಡಿಕೆಯಾದ ಕಂಪ್ಲಿ- ಗಂಗಾವತಿ ತುಂಗಭದ್ರಾ, ಸೇತುವೆಯು ಲೋಕೋಪಯೋಗಿ ಸಚಿವರ ಅಶ್ವಾಸನೆಯಿಂದ 120 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಕ್ಕೆ ಅನುಮೋದನೆ ದೊರಕಿಸಿಕೊಂಡಿರುವುದು ಈ ಕ್ಷೇತ್ರದ ಶಾಸಕರ ಆಸಕ್ತಿ, ಕ್ರಿಯಾಶೀಲ ಕೆಲಸ ವ್ಯಕ್ತಿತ್ವ ಬಿಂಬಿಸುತ್ತಿದೆ ಎಂದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮಾತನಾಡಿ, ಎಲ್ಲಾ ಇಲಾಖೆಗಳ ಸಚಿವರನ್ನು ವಿಶ್ವಾಸಕ್ಕೆ ಪಡೆದು ರಾಜ್ಯದ 224 ಕ್ಷೇತ್ರಗಳಲ್ಲಿಯೇ ಅತಿಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡುತ್ತಿರುವ ಶಾಸಕರೆಂದರೆ ಅದು ಜೆ.ಎನ್.ಗಣೇಶ್;ಈ ಭಾಗದಲ್ಲಿ ಅಭಿವೃದ್ಧಿಯ ಪರ್ವವೇ ನಡೆಯುತ್ತಿದೆ ಎಂದು ಹೇಳಿದರು.

ನಮ್ಮ ಕುಟುಂಬಕ್ಕೆ ರಾಜಕೀಯ ನೆಲೆ ನೀಡಿರುವುದು ಆಗಿನ ಈ ಕುರುಗೋಡು ಕ್ಷೇತ್ರ. ಇಲ್ಲಿ ನಮ್ಮ ತಂದೆಯೂ ಸಹ ಹಲವಾರು ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಶಾಸಕ ಜೆ.ಎನ್.ಗಣೇಶ್ ಅವರು ಮಾಡುತ್ತಿದ್ದಾರೆ ಎಂದರು.

ಕಂಪ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್.ಗಣೇಶ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಿಂಧರ ನಾಡು ಕುರುಗೋಡು ಪಟ್ಟಣದ ಇತಿಹಾಸ ಈಗಿನ ಪೀಳಿಗೆಗೆ ತಿಳಿಯಪಡಿಸುವ ಕೆಲಸವಾಗಬೇಕು ಎಂಬುದು ಕ್ಷೇತ್ರದ ಜನರ ಬಹುದಿನಗಳ ಒತ್ತಾಸೆಯಾಗಿತ್ತು. ಸತತ ಮೂರು ತಿಂಗಳ ಪ್ರಯತ್ನದಿಂದ ಉತ್ಸವ ಆಯೋಜನೆಗೆ ಕಾಲ ಈಗ ಕೂಡಿಬಂದಿತು ಎಂದು ಹೇಳಿದರು.

ಕಂಪ್ಲಿ ಕ್ಷೇತ್ರದ ಕಂಪ್ಲಿ- ಕುರುಗೋಡು ಪಟ್ಟಣಗಳಲ್ಲಿ ಮಿನಿ ವಿಧಾನಸೌಧ, 100 ಹಾಸಿಗೆಯುಳ್ಳ ಆಸ್ಪತ್ರೆ, ತಾಲ್ಲೂಕು ಆಡಳಿತ ಕಚೇರಿ, ಪುರಸಭೆ ಕಚೇರಿ ಸೇರಿದಂತೆ ಎರಡೆರಡು ಕಟ್ಟಡಗಳು ನಿರ್ಮಾಣಗೊಂಡಿವೆ. ಅದೇರೀತಿಯಾಗಿ ಕುರುಗೋಡು ಪಟ್ಟಣದಲ್ಲಿ 2 ಲೇನ್ ರಸ್ತೆ, ಕುರುಗೋಡಿನ ಕೋಳೂರು ಕ್ರಾಸ್ ನಿಂದ ಕಂಪ್ಲಿಯವರೆಗೆ ಗುಂಡಿಮುಕ್ತ ರಸ್ತೆ ನಿರ್ಮಾಣ, ಶಾಲಾ-ಕಾಲೇಜುಗಳು, ವಸತಿನಿಲಯಗಳು ಸೇರಿದಂತೆ ಹಲವಾರು ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದರು.

ರೈತರ ಸಮಸ್ಯೆ ಎಂದರೆ ಮಣಿಯುವ ಶಾಸಕನಲ್ಲ, ಹೇಳುವವನಲ್ಲ ಬದಲಾಗಿ ಕೆಲಸ ಮಾಡಿ ತೋರಿಸುವವ ನಾನು. ಕ್ಷೇತ್ರದ ಜನತೆಯ ಪ್ರೀತಿ ವಿಶ್ವಾಸದಿಂದ ಎರಡು ಬಾರಿ ಶಾಸಕನಾಗಲು ಅವಕಾಶ ನೀಡಿದ್ದೀರಿ; ಮುಂಬರುವ ದಿನಗಳಲ್ಲಿ ಇನ್ನಷ್ಟು ಸೇವೆ ಮಾಡುವ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಸಮಾರಂಭದಲ್ಲಿ ಗಣ್ಯರು ''ಕುರುಗೋಡು ಉತ್ಸವ ಐತಿಹಾಸಿಕ ದೇವಸ್ಥಾನಗಳ ದರ್ಶನ'' ಪುಸ್ತಕ ಬಿಡುಗಡೆ ಮಾಡಿದರು.


ಈ ವೇಳೆ ಬೆಳಗಾವಿ ಉತ್ತರ ಕ್ಷೇತ್ರ ಶಾಸಕ ಆಸೀಫ್ ಸೇಟ್, ಕಿತ್ತೂರು ಕ್ಷೇತ್ರ ಶಾಸಕ ಬಾಬಾ ಸಾಹೇಬ್ ಪಾಟೀಲ್, ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ಪುರಸಭೆ ಉಪಾಧ್ಯಕ್ಷ ಚನ್ನಪಟ್ಟಣ ಮಲ್ಲಿಕಾರ್ಜುನ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್.,

ಸಹಾಯಕ ಆಯುಕ್ತ ರಾಜೇಶ್.ಹೆಚ್.ಡಿ., ಕುರುಗೋಡು ತಹಶೀಲ್ದಾರ ನರಸಪ್ಪ, ಕಂಪ್ಲಿ ತಹಶೀಲ್ದಾರ ಜೂಗಲ ಮಂಜುನಾಯ್ಕ, ಸಂಡೂರು ತಹಶೀಲ್ದಾರ ಅನಿಲ್ ಕುಮಾರ್ ಸೇರಿದಂತೆ ಪುರಸಭೆ ಸದಸ್ಯರು, ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

ಕಾರ್ಯಕ್ರಮದಲ್ಲಿ ಜೀ ಕನ್ನಡ ಸರಿಗಮಪ ಸೀಸನ್ 20 ರ ವಿಜೇತೆ ಶಿವಾನಿ ಶಿವದಾಸ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಕ್ರಾಂತಿ ಗೀತೆ ಮೊಳಗಿಸಿದರು. ಇದಕ್ಕೂ ಮುನ್ನ ವೇದಿಕೆಯಲ್ಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಬಳಿಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಶೇಷ ಸಾಧಕರಿಗೆ ಸನ್ಮಾನಿಸಲಾಯಿತು.

ನಂತರ ಬೆಂಗಳೂರಿನ ಜೀ ಕನ್ನಡ ಕಾಮಿಡಿ ಕಿಲಾಡಿಗಳ ಪ್ರವೀಣ್ ಗಸ್ತಿ ತಂಡದಿಂದ ಹಾಸ್ಯ ಸಂಜೆ ಕಾರ್ಯಕ್ರಮ, ಬಳಿಕ ಖ್ಯಾತ ರ್‍ಯಾಪ್ ಗಾಯಕರಾದ ಆಲ್-ಓಕೆ, ಚಂದನಶೆಟ್ಟಿ ಸೇರಿದಂತೆ ಇತರೆ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ ನಡೆದವು.

ರಾಜ್ಯ ಕಾಂಗ್ರೆಸ್ ಸರಕಾರ ಹಗರಣದಲ್ಲಿಯೇ ಮುಳುಗಿದೆ : ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಆರೋಪ



ಕೊಪ್ಪಳ,ಫೆ.18-

ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರ ಆಡಳಿತದ ಸಾವಿರ ದಿನಗಳ ಅವಧಿಯಲ್ಲಿ ಮಿತಿ ಮೀರಿದ ಭ್ರಷ್ಟಾಚಾರ, ಆಡಳಿತ ವೈಫಲ್ಯ ಹಾಗೂ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿತ ಕಂಡಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿರುವ ಕುಷ್ಟಗಿ ವಿಧಾನಸಭಾ ಕ್ಷೇತ್ರದ ಶಾಸಕ ದೊಡ್ಡನಗೌಡ ಪಾಟೀಲ್ ಆರೋಪಿಸಿದರು.

ವಿಪ ಸದಸ್ಯೆ ಹೇಮಲತಾ ನಾಯಕ್, ಮಾಜಿ ಸಚಿವ ಹಾಲಪ್ಪ ಆಚಾರ, ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಅವರೊಂದಿಗೆ ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ, ಸರಕಾರದ ಕಾರ್ಯ ವೈಖರಿ ಖಂಡಿಸಿದರು.

ಅಬಕಾರಿ ಇಲಾಖೆಯಲ್ಲಿ ಲೈಸೆನ್ಸ್ ಮತ್ತು ವರ್ಗಾವಣೆಗಳಿಗೆ ಲಂಚ ಬೇಡಿಕೆ ಆರೋಪದ ಕುರಿತು ಸಾಕ್ಷ್ಯಾಧ್ಯರವಿದ್ದರೂ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ಸಮರ್ಥಿಸಿಕೊಂಡ ಸರಕಾರವಿದು ಎಂದು ಟೀಕಿಸಿದರು.

ಸರಕಾರದ ಗ್ಯಾರಂಟಿ ಯೋಜನೆಗಳಿಗೆ ಭಾರೀ ಪ್ರಮಾಣದ ಹಣ ವ್ಯಯವಾಗಿದ್ದು, ಅದರ ಅನುಷ್ಠಾನದಲ್ಲಿ ಪಾರದರ್ಶಕತೆ ಕೊರತೆ ಇದೆ. ಅನ್ನಭಾಗ್ಯ ಮತ್ತು ಗೃಹಲಕ್ಷ್ಮಿ ಯೋಜನೆಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದು, ಬಿಪಿಎಲ್ ಕಾರ್ಡ್ಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡುವ ಕ್ರಮವೂ ಸಾರ್ವಜನಿಕರಲ್ಲಿ ಚರ್ಚೆಗೆ ಕಾರಣವಾಗಿದೆ. ಕಾನೂನು ಸುವ್ಯವಸ್ಥೆ ವಿಚಾರದಲ್ಲಿಯೂ ಸಂಪೂರ್ಣ ವಿಫಲವಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಬ್ಯಾಂಕ್ ದರೋಡೆ, ಸೈಬರ್ ವಂಚನೆ, ಕೊಲೆ ಪ್ರಕರಣಗಳು ಹೆಚ್ಚಾಗಿವೆ ಎಂದು ಹೇಳಿದರು.

ಇದೇ ವೇಳೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆ ಕೂಡ ಆಡಳಿತದ ನಿರ್ಲಕ್ಷ್ಯಕ್ಕೆ ಉದಾಹರಣೆ. ಆದರೆ, ಆಡಳಿತ ಪಕ್ಷ ನಾಯಕರು ಈ ಆರೋಪಗಳಲ್ಲಿ ಹಲವನ್ನು ರಾಜಕೀಯ ಪ್ರೇರಿತ ಎಂದು ತಳ್ಳಿ ಹಾಕಿರುವುದು ದುರದೃಷ್ಟಕರ ಎಂದು ಅವರು ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ಭದ್ರತೆಯ ನೆಪದಲ್ಲಿ ಮಾಧ್ಯಮಗಳ ವಾಕ್ ಸ್ವಾತಂತ್ರ್ಯ ಹರಣ: ಬಿಜೆಪಿ

ಬೆಂಗಳೂರು: ವಿಧಾನಸೌಧದ ನಿಗದಿತ ಸ್ಥಳದಲ್ಲಿ ಮಾತ್ರವೇ ಮಾಧ್ಯಮಗಳು ಅಧಿಕೃತ ಹೇಳಿಕೆ ಪಡೆಯಬೇಕು ಹಾಗೂ ಮುಖ್ಯಮಂತ್ರಿ ಮತ್ತು ಸಚಿವರು ವಿಧಾನಸೌಧ ಪ್ರವೇಶಿಸುವಾಗ ಅವರನ್ನು ಹಿಂಬಾಲಿಸಿ ವಿಡಿಯೋ ಹೇಳಿಕೆ ಪಡೆಯದಂತೆ ನಿರ್ದೇಶಿಸಬೇಕೆಂದು ವಾರ್ತಾ ಇಲಾಖೆಗೆ ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆ ಪತ್ರ ಬರೆದಿದೆ.



ಕೆಲ ದಿನಗಳ ಹಿಂದೆ ವಿಧಾನಸೌಧದಲ್ಲಿನ ಕಚೇರಿ ಬಳಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರ ಚಿನ್ನಾಭರಣ ಕಳವಾಗಿತ್ತು. ಈ ಸಂಬಂಧ ಸರ್ಕಾರಿ ನೌಕರರನ್ನು ಬಂಧಿಸಲಾಗಿತ್ತು. ಈ ಬೆಳವಣಿಗೆಯ ಬೆನ್ನಲ್ಲೇ ಭದ್ರತೆ ಹಿತದೃಷ್ಟಿಯಿಂದ ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ನಿಗದಿಪಡಿಸಿರುವ ಸ್ಥಳದಲ್ಲಿ ಮಾತ್ರವೇ ವಿಡಿಯೋ ಹೇಳಿಕೆ ಪಡೆಯಬೇಕು. ಸಚಿವರು ಆಗಮಿಸುವಾಗ ಅವರನ್ನು ಹಿಂಬಾಲಿಸಿ ಬೈಟ್ ಅಥವಾ ಸಂದರ್ಶನ ಮಾಡಕೂಡದು. ಈ ಬಗ್ಗೆ ಮಾಧ್ಯಮಗಳಿಗೆ ನಿರ್ದೇಶಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಯದುಕುಮಾರ್ ಪತ್ರದಲ್ಲಿ ತಿಳಿಸಿದ್ದಾರೆ.


ಸರ್ಕಾರದ ನಡೆಗೆ ಆಕ್ರೋಶ ಹೊರಹಾಕಿರುವ ಪ್ರತಿಪಕ್ಷ ಬಿಜೆಪಿ, ಇದು ಭದ್ರತೆಯ ನೆಪದಲ್ಲಿ ವಾಕ್ ಸ್ವಾತಂತ್ರ್ಯ ಹರಣ ಮಾಡುವ ಉದ್ದೇಶ ಎಂದಿದೆ. ಪ್ರತಿಪಕ್ಷ ನಾಯಕ ಆರ್.ಅಶೋಕ್ ಪ್ರತಿಕ್ರಿಯಿಸಿ, ಇತ್ತೀಚೆಗೆ ಮಾಧ್ಯಮಗಳು ಬಯಲು ಮಾಡಿದ ಸಚಿವ ಬೈರತಿ ಸುರೇಶ್ ಅವರ ಕಚೇರಿಯಲ್ಲಿ ನಡೆದ ಲಕ್ಷಾಂತರ ರೂಪಾಯಿ ಚಿನ್ನ, ನಗದು ಕಳ್ಳತನದಂತಹ ಪ್ರಕರಣಗಳು, ಅಕ್ರಮ ವ್ಯವಹಾರಗಳು ಇನ್ನಷ್ಟು ಬಯಲಾಗುತ್ತವೆ ಎನ್ನುವ ಭಯದಿಂದ ಈ ನಿರ್ಧಾರ ತೆಗೆದುಕೊಂಡಂತಿದೆ. ವಿಧಾನಸೌಧ ನಿಮ್ಮ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲ. ಏಳು ಕೋಟಿ ಕನ್ನಡಿಗರಿಗೆ ಸೇರಿದ ಶಕ್ತಿಸೌಧ. ಅಲ್ಲಿಗೆ ಮಾಧ್ಯಮದವರನ್ನು ಬರಬೇಡಿ ಎಂದು ನಿಯಂತ್ರಣ ಮಾಡಲು ಯಾರಿಗೂ ಅಧಿಕಾರವಿಲ್ಲ. ವಿಧಾನಸೌಧದ ನಿಗದಿತ ಸ್ಥಳದಲ್ಲಿ ಮಾತ್ರ ಸಂದರ್ಶನ ಮಾಡಬೇಕೆಂಬ ಈ ಅಸಂವಿಧಾನಿಕ ನಡೆಯನ್ನ ಕೂಡಲೇ ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿದ್ದಾರೆ.

ಬಿಜೆಪಿ ರಾಜಾಧ್ಯಕ್ಷ ಬಿ.ಎಸ್.ವಿಜಯೇಂದ್ರ ಮಾತನಾಡಿ, ದ್ವೇಷ ಭಾಷಣ ಕಾಯ್ದೆಯನ್ನು ಜಾರಿಗೆ ತರುವ ದುಸ್ಸಾಹಸ ನಡೆಸಿರುವ ಬೆನ್ನಲ್ಲೇ ವಿಧಾನಸೌಧದಲ್ಲಿ ಮಾಧ್ಯಮದ ಮೇಲೆ ನಿಯಂತ್ರಣ ಹೇರುವ ನಿರ್ಬಂಧ ಹೇರಲು ಮಾಧ್ಯಮ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಸುತ್ತೋಲೆ ಹೊರಡಿಸಿ, ಮಾಧ್ಯಮ ಕ್ಷೇತ್ರದ ಮೇಲೆ ಅಂಕುಶ ಹಾಕಲು ಹೊರಟಿದೆ. ಭದ್ರತೆಯ ಹೆಸರಿನಲ್ಲಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲು ಹೊರಟಿರುವ ಈ ನಿರ್ಧಾರ ಅತ್ಯಂತ ಖಂಡನೀಯ ಹಾಗೂ ನಾಚಿಕೆಗೇಡಿತನದ ಪರಮಾವಧಿಯಾಗಿದೆ ಎಂದರು.

ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ಸರ್ಕಾರದ ನಿರ್ಧಾರವು ಪ್ರಜಾಪ್ರಭುತ್ವ ಹಾಗೂ ವಾಕ್ ಸ್ವಾತಂತ್ರ್ಯದ ಮೇಲೆ ಮಾಡಿರುವ ದಾಳಿಯಾಗಿದೆ. ಈ ಬೆಳವಣಿಗೆ ಗಮನಿಸಿದರೆ ತುರ್ತು ಪರಿಸ್ಥಿತಿ ನೆನಪಾಗುತ್ತಿದೆ. ಭದ್ರತೆ ಲೋಪ ಸರಿ ಮಾಡಿಕೊಂಡು ತಕ್ಷಣವೇ ಸರ್ಕಾರದ ಸುತ್ತೋಲೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿದ್ದಾರೆ.

ಜೆಡಿಎಸ್ ಯುವ ಘಟಕದ ರಾಜಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನಸೌಧದಲ್ಲಿ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಿರುವುದು ಯಾವ ಸಂವಿಧಾನದ ನಿಯಮ. ಮೊದಲು ಕರ್ನಾಟಕ ಸರ್ಕಾರಕ್ಕೆ ಸಂವಿಧಾನದ ಪಾಠ ಮಾಡಿ ಎಂದು ರಾಹುಲ್ ಗಾಂಧಿ ಅವರನ್ನ ಪ್ರಶ್ನಿಸಿದ್ದಾರೆ. ಮಾಧ್ಯಮಗಳನ್ನು ಪಂಜರದಲ್ಲಿ ಇಡಲು ಹೊರಟಿರುವ ಈ ಕರಾಳ ಸುತ್ತೋಲೆ ಅಪ್ಪಟ ತುರ್ತು ಪರಿಸ್ಥಿತಿಯ ಮುಂದುವರಿದ ಭಾಗವಾಗಿದೆ ಎಂದು ಟೀಕಿಸಿದರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಈಶ್ವರ್ ಖಂಡ್ರೆ ಅವರ ಕೊಡುಗೆ ಅಪಾರ: ಡಾ. ಬಸವಲಿಂಗ ಪಟ್ಟದೇವರು



ಭಾಲ್ಕಿ, ಫೆ.18-

ಸಚಿವ ಈಶ್ವರ್ ಖಂಡ್ರೆ ಅವರು ಕಲ್ಯಾಣ ಕರ್ನಾಟಕ ಭಾಗದ ಜನರ ಕಷ್ಟಗಳನ್ನು ನಿಭಾಯಿಸುತ್ತಿದ್ದು, ಪ್ರದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಅಭಿಪ್ರಾಯಪಟ್ಟರು.

ಪಟ್ಟಣದ ಚನ್ನಬಸವ ಆಶ್ರಮ ದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷರಾಗಿ ಆಯ್ಕೆಯಾದ ಈಶ್ವರ್ ಖಂಡ್ರೆ ಅವರಿಗೆ ನಡೆದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಖಂಡ್ರೆ ಅವರು ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಮಂತ್ರಿಯಾಗಿ ಸೇವೆ ಸಲ್ಲಿಸಿ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅನುಭವ ಮಂಟಪ ನಿರ್ಮಾಣಕ್ಕೂ ಅವರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ರಾಜಕೀಯ ಎಂದರೆ ಸಮಾಜ ಸೇವೆ ಎಂಬ ಸಂದೇಶವನ್ನು ತಮ್ಮ ತಂದೆಯಿಂದ ಪಡೆದಿದ್ದಾಗಿ ಹೇಳಿದರು. ಕ್ಷೇತ್ರದ ಜನರ ಆಶೀರ್ವಾದದಿಂದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದೇನೆ. ಪ್ರಸ್ತುತ ಅರಣ್ಯ ಸಚಿವನಾಗಿ ಪರಿಸರ ಮತ್ತು ಪ್ರಕೃತಿ ಸಂರಕ್ಷಣೆಗೆ ಒತ್ತು ನೀಡುತ್ತಿದ್ದೇನೆ ಎಂದರು.

ಭಾಲ್ಕಿ ಕ್ಷೇತ್ರದ ಗೌರವವನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೆಚ್ಚಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಮನುಷ್ಯ ಮಾಡಿದ ಸೇವೆ ಶಾಶ್ವತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟ ಅವರು, ನೂತನ ಅನುಭವ ಮಂಟಪವನ್ನು 2027ರ ಮಾರ್ಚ್ ಒಳಗಾಗಿ ಲೋಕಾರ್ಪಣೆ ಮಾಡುವುದಾಗಿ ಘೋಷಿಸಿದರು.

ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು, ಗೀತಾ ಈಶ್ವರ್ ಖಂಡ್ರೆ, ಅಭಿನಂದನಾ ಸಮಾರಂಭದ ಅಧ್ಯಕ್ಷ ರಾಜಶೇಖರ್ ಅಷ್ಟೂರೆ, ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ, ದೀಪಕ್ ಸೇರಿದಂತೆ ಅನೇಕರು ಇದ್ದರು.

ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವು ಇರಬೇಕು: ಡಾ.ಸಿ.ಸೋಮಶೇಖರ



ಕಲಬುರಗಿ,ಫೆ.18-

ಓದು ನಿರಂತರವಾದರೆ ಜ್ಞಾನ ಮತ್ತು ಪರೀಕ್ಷೆ ಫಲಿತಾಂಶ ಉತ್ತಮವಾಗುತ್ತದೆ. ಸಾಧನೆಗೆ ಬಡತನ ಅಡ್ಡಿ ಬರಬಾರದು, ಜ್ಞಾನದ ಹಸಿವು ಮಕ್ಕಳಲ್ಲಿ ಇದ್ದಾಗ ಜೀವನ ಯಶಸ್ವಿಯಾಗುತ್ತದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ.ಸಿ.ಸೋಮಶೇಖರ ಹೇಳಿದರು.

ಸೋಮವಾರ ನಗರದ ಸತ್ಯಂ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಓದಿನ ಕಡೆ ಗಮನ ಕೊಟ್ಟು ಹೆಚ್ಚು ಅಂಕಗಳನ್ನು ಪಡೆಯುವಲ್ಲಿ ಹಾಗೂ ಯಶಸ್ವಿಯಾಗಲು ಶಿಕ್ಷಕರ ಶ್ರಮ ಅವಶ್ಯಕತೆ ಇದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಬಿ.ಎಚ್. ನಿರಗುಡಿ, ವಿದ್ಯಾರ್ಥಿಗಳು ಸತತ ಅಭ್ಯಾಸ ಮಾಡಿ ಗುರಿ ಮುಟ್ಟುವ ಕಡೆ ಪ್ರಯತ್ನ ಮಾಡಬೇಕು, ಮೊಬೈಲ್ ನಿಂದ ದೂರವಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತುಗಳನ್ನು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಗುರೂಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕಲ್ಯಾಣರಾವ ಶೀಲವಂತ ಅವರು ಮಾತನಾಡುತ್ತಾ, ಮಕ್ಕಳು ತರಗತಿಯಲ್ಲಿ ಉಪನ್ಯಾಸಕರು ಹೇಳಿದ ವಿಷಯಗಳನ್ನು ಸರಿಯಾಗಿ ಮನನ ಮಾಡಿಕೊಂಡು ಓದಿದಾಗ ನಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದರು.

ದಿಶಾ ಪಿಯು ಕಾಲೇಜಿನ ಅಧ್ಯಕ್ಷರಾದ ಶಿವಾನಂದ ಖಜೂರಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪನ್ಯಾಸಕರಾದ ಮಹೇಶ್ ಗಡಗಿ, ಸಂತೋಷ ಪಿಳ್ಳೈ , ಕಾಶೀನಾಥ್ ಪಂಚಾಳ, ಸಚ್ಚಿದಾನಂದ ಪಾಟೀಲ್, ರೂಪಾ ಕುಲಕರ್ಣಿ, ರಾಜೇಶ್ವರಿ ಸಾಲಿಮಠ, ನಿರ್ಮಲಾ ಕಣ್ಣುಸೆ, ವಿಶ್ವಜ್ಯೋತಿ ಮಠ, ಡಾ.ಸುಲೋಚನಾ ಅಂಕಲಗಿ ಇದ್ದರು. ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ಯಾಡ್, ಫೈಲ್, ಪೆನ್ನು ನೀಡಲಾಯಿತು.

ನಿಮ್ಮೂರು ಸುದ್ದಿ

ಸಂಪಾದಕೀಯ

ಆರ್‌ಎಸ್‌ಎಸ್ ಬಲ, ಮಾಧ್ಯಮಗಳ ಬೆಂಬಲದಿಂದ ಬಿಜೆಪಿ ಬದುಕಿದೆಯೇ?



ಮಾಧ್ಯಮಗಳ ಬೆಂಬಲದಿಂದ ಕಮಲದ ಕೆಸರು ಕಾಣದಂತಾಗಿದೆ. ಆರ್‌ಎಸ್‌ಎಸ್‌ನ ಬಲದಿಂದ ಬಿಜೆಪಿ ಬೆಳೆಯುತ್ತಿದೆ. ಇವೆರಡರ ಬೆಂಬಲವಿಲ್ಲದ ಬಿಜೆಪಿಯನ್ನು ಊಹಿಸಿಕೊಳ್ಳುವುದೂ ಕಷ್ಟವಿದೆ.

ಇತ್ತೀಚಿನ ಕಾರ್ಯಕ್ರಮವೊಂದರಲ್ಲಿ ಐಟಿ-ಬಿಟಿ ಸಚಿವ ಪ್ರಿಯಾಂಕ ಖರ್ಗೆಯವರು, ಆರ್‌ಎಸ್‌ಎಸ್ ಇಲ್ಲದಿದ್ದರೆ ಬಿಜೆಪಿಯು ಜೆಡಿಎಸ್‌ಗಿಂತಲೂ ಕಡೆಯಾಗುತ್ತಿತ್ತು, ಬೆಲೆ ಕಳೆದುಕೊಳ್ಳುತ್ತಿತ್ತು ಎಂದು ಹೇಳಿದರು.

ಸಚಿವ ಪ್ರಿಯಾಂಕ ಖರ್ಗೆಯವರ ಮಾತಿನಲ್ಲಿ ಸತ್ಯವಿದೆ. ಆದರೆ ಅದನ್ನು ಜೆಡಿಎಸ್‌ನೊಂದಿಗೆ ಹೋಲಿಕೆ ಮಾಡಿದ್ದು ಸರಿ ಇಲ್ಲ ಎನಿಸುತ್ತದೆ. ಏಕೆಂದರೆ, 90ರ ದಶಕದಲ್ಲಿ ರಾಜ್ಯದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜನತಾದಳ, ಇಂದು ಜೆಡಿಎಸ್ ಆಗಿ ತನ್ನ ಅಸ್ತಿತ್ವ ಕಳೆದುಕೊಂಡಿರಬಹುದು, ಕಣ್ಮರೆಯಾಗಿಲ್ಲ. ಇದೇ ಮಾತುಗಳನ್ನು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ಸ್ಥಿತಿ ಕುರಿತು ಹೇಳಬಹುದು. 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಗಳಿಸಿದ 99 ಸ್ಥಾನಗಳತ್ತಲೂ ನೋಡಬಹುದು.

ಭಾರತದ ರಾಜಕೀಯ ಇತಿಹಾಸದಲ್ಲಿ ಪಕ್ಷಗಳು ಕಳೆಗುಂದುವುದು, ಸ್ಥಾನಗಳು ಏರುಪೇರಾಗುವುದು ಹೊಸದೇನೂ ಅಲ್ಲ. ಭಾರತೀಯ ಜನತಾ ಪಕ್ಷ ಕೂಡ 1991ರ ಸಾರ್ವತ್ರಿಕ ಚುನಾವಣೆಯಲ್ಲಿ 120 ಸ್ಥಾನಗಳನ್ನಷ್ಟೇ ಗೆದ್ದಿತ್ತು. ಇಂದು ಬಹುದೊಡ್ಡ ರಾಜಕೀಯ ಪಕ್ಷವಾಗಿದೆ. ಅತಿ ಹೆಚ್ಚು ದೇಣಿಗೆ- 7,113 ಕೋಟಿ ಸಂಗ್ರಹಿಸಿ ಸಂಪದ್ಭರಿತ ಪಕ್ಷವೆನಿಸಿಕೊಂಡಿದೆ. ಸತತ ಮೂರನೇ ಬಾರಿಗೆ ಗೆದ್ದು ಪ್ರಬಲ ಪಕ್ಷವಾಗಿ ಹೊರಹೊಮ್ಮಿದೆ.

ಬಿಜೆಪಿ ಈ ಸ್ಥಿತಿಗೆ ಬರಲು, ಆರ್‌ಎಸ್‌ಎಸ್ ಬೆಂಬಲವೇ ಮುಖ್ಯ ಕಾರಣವಾಗಿದೆ. ಅಸಲಿಗೆ, ಆರ್‌ಎಸ್‌ಎಸ್ ತಾನು ರಾಜಕೀಯದಿಂದ ಆಚೆಗಿರುವ ಸಂಘಟನೆ ಎಂದು ಹೇಳಿಕೊಳ್ಳುತ್ತದೆಯಾದರೂ, ಆರ್‌ಎಸ್‌ಎಸ್‌ನ ರಾಜಕೀಯ ಅಂಗವೇ ಬಿಜೆಪಿ ಎನ್ನುವುದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ. ಅಲ್ಲದೆ, ಬಿಜೆಪಿಗೆ ಸೈದ್ಧಾಂತಿಕ ತಳಹದಿಯನ್ನು ಹಾಕಿಕೊಟ್ಟಿದ್ದು ಹಾಗೂ ಸಂಘಟನಾ ಶಕ್ತಿಯನ್ನು ಒದಗಿಸುವುದು ಆರ್‌ಎಸ್‌ಎಸ್. ಹೀಗಿರುವಾಗ ಪಕ್ಷವೇ ಬೇರೆ ಸಂಘವೇ ಬೇರೆ ಎಂದರೆ, ಪ್ರಿಯಾಂಕ ಖರ್ಗೆ ಹೇಳಿದಂತೆ, ಬಿಜೆಪಿ ಬೆಲೆ ಕಳೆದುಕೊಳ್ಳುತ್ತದೆ.

ಇದಕ್ಕೆ ಇತ್ತೀಚಿನ ಉದಾಹರಣೆಯಾಗಿ ಮಹಾರಾಷ್ಟ್ರ ರಾಜಕಾರಣವನ್ನು ಗಮನಿಸಬಹುದಾಗಿದೆ. ಏಪ್ರಿಲ್ 2024ರಲ್ಲಿ, ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ನಾಯಕರು ಮತ್ತು ಸಂಘದ ಮುಖ್ಯಸ್ಥರ ನಡುವೆ ಮುನಿಸು ತಲೆದೋರಿತ್ತು. ಅದನ್ನು ಪುಷ್ಟೀಕರಿಸುವಂತೆ ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ದಿ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ, ಬಿಜೆಪಿಗೆ ಇನ್ನು ಆರ್‌ಎಸ್‌ಎಸ್ ಕೈ ಹಿಡಿದು ನಡೆಸುವ ಅಗತ್ಯವಿಲ್ಲ ಎಂದು ಹೇಳಿದ್ದು- ಆರ್‌ಎಸ್‌ಎಸ್ ನಾಯಕರಿಗೆ ಇರುಸು ಮುರುಸುಂಟುಮಾಡಿತ್ತು. ಆ ಮುನಿಸು ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ, ಅದರಲ್ಲೂ ಮಹಾರಾಷ್ಟ್ರದಲ್ಲಿ ಬಿಜೆಪಿ ಕೇವಲ 9 ಸ್ಥಾನಗಳನ್ನು ಗೆಲ್ಲುವುದರ ಮೂಲಕ ಎದ್ದು ಕಂಡಿತ್ತು. ಮೋದಿಯ ಚಾರ್ ಸೌ ಪಾರ್ ಘೋಷಣೆ ಗೇಲಿಗೊಳಗಾಗಿತ್ತು; 240 ಸ್ಥಾನಗಳಿಗೆ ಸೀಮಿತಗೊಂಡು ಬಿಜೆಪಿ ಬುಡಕ್ಕೆ ಬಿಸಿನೀರು ಬಿಟ್ಟಿತ್ತು.

ಹಾಗೆಯೇ ಮಹಾರಾಷ್ಟ್ರ ರಾಜ್ಯ ಬಿಜೆಪಿ ಹಿಡಿತದಿಂದ ಕಳಚಿಕೊಳ್ಳುವುದು ಖಚಿತವಾಗಿತ್ತು. ಬಿಜೆಪಿಯ ದೆಹಲಿ ನಾಯಕರು ಕೂಡ ವಿಶ್ವಾಸ ಕಳೆದುಕೊಂಡಿದ್ದರು. ಆದರೆ, ನಾಗಪುರದ ಆರ್‌ಎಸ್‌ಎಸ್ ಕೇಂದ್ರ ಕಚೇರಿ ಕಣ್ಣುಮುಚ್ಚಿ ಕೂರಲಿಲ್ಲ. ಲೋಕಸಭಾ ಚುನಾವಣೆ ನಡೆದು ಕೇವಲ 7 ತಿಂಗಳ ಅಂತರದಲ್ಲಿ, ನವೆಂಬರ್ 2024ರಲ್ಲಿ, ಎದುರಾದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 132 ಸ್ಥಾನಗಳನ್ನು ಗೆಲ್ಲುವಂತೆ ನೋಡಿಕೊಂಡಿತ್ತು. ಬಿಜೆಪಿ ಮತ್ತೆ ಅಧಿಕಾರಕ್ಕೇರಿತ್ತು. ಇದು ಹೇಗೆ ಸಾಧ್ಯ ಎಂದು ಇಡೀ ದೇಶವೇ ಮಹಾರಾಷ್ಟ್ರದತ್ತ ನೋಡಿತ್ತು. ಬಿಜೆಪಿ ಗೆಲುವಿನ ಹಿಂದೆ ಆರ್‌ಎಸ್‌ಎಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರ ಆದೇಶವಿತ್ತು.

ದೇಶದಲ್ಲಿ ಬಿಜೆಪಿ ಬೆಳೆಯಲು, ಭದ್ರವಾಗಿ ಬೇರೂರಲು ದೇಶದಾದ್ಯಂತ ಅನಧಿಕೃತವಾಗಿ 2,500 ಅಂಗಸಂಸ್ಥೆಗಳನ್ನು ಹೊಂದಿರುವ ಮನುವಾದಿ ಆರ್‌ಎಸ್‌ಎಸ್ ಪಾತ್ರ ಎಷ್ಟು ಮುಖ್ಯವೋ; ಮನುವಾದಿ ಮನಸ್ಥಿತಿಯ ಸುದ್ದಿ ಮಾಧ್ಯಮಗಳ ಪಾತ್ರವೂ ಅಷ್ಟೇ ಮುಖ್ಯ. ದೇವರು, ಧರ್ಮ, ಹಿಂದುತ್ವ, ರಾಷ್ಟ್ರೀಯತೆಯ ಸನ್ನಿಗೆ ಅಥವಾ ಅಮೇಧ್ಯದ ಆಸೆಗೆ ಬಲಿಯಾದ ಮಾಧ್ಯಮಗಳು ಕಳೆದ ಹನ್ನೊಂದು ವರ್ಷಗಳಲ್ಲಿ ನಿರ್ವಹಿಸಿದ ರೀತಿಯನ್ನು ಅವಲೋಕಿಸಿದರೆ- ಬಿಜೆಪಿ ಬದುಕಿರುವ ಸುಳಿವು ಸಿಗುತ್ತದೆ. 2014ರಿಂದ 2025ರವರೆಗೆ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ, ಸುಮಾರು 6 ಸಾವಿರ ಕೋಟಿ ರೂ.ಗಳನ್ನು ಮುದ್ರಣ, ಟೆಲಿವಿಷನ್ ಮತ್ತು ಡಿಜಿಟಲ್ ಮಾಧ್ಯಮಗಳ ಜಾಹೀರಾತುಗಳಿಗೆ ಧಾರಾಳವಾಗಿ ದಾನ ಮಾಡಿರುವುದು, ಅದನ್ನು ಸಾಬೀತುಪಡಿಸುತ್ತದೆ. ಇದಲ್ಲದೆ, ಪಕ್ಷದ ವತಿಯಿಂದ, ಕೇವಲ ಒಂದೇ ಒಂದು 2024ರ ಚುನಾವಣೆಗಾಗಿ 1,737 ಕೋಟಿ ರೂ.ಗಳು ಜಾಹೀರಾತಿನ ಮೂಲಕ ಮಾಧ್ಯಮಗಳಿಗೆ ಹರಿದುಬಂದಿದೆ. ಬಿಜೆಪಿ ಮತ್ತು ಮಾಧ್ಯಮಗಳ ಅನೈತಿಕ ಮಿಲನದ ಫಲವಾಗಿ, ಬೂಟು ನೆಕ್ಕುವ ಪತ್ರಕರ್ತರು ಮತ್ತು ಗೋದಿ ಮೀಡಿಯಾ ಎಂಬ ಹೊಸ ವ್ಯಾಖ್ಯಾನವೇ ಚಾಲ್ತಿಗೆ ಬಂದಿದೆ.

ಇಂದು ದೇಶದಲ್ಲಿ ಬಿಜೆಪಿ ಬೆಂಬಲದಿಂದ ಅನೇಕ ಮಾಧ್ಯಮ ಸಂಸ್ಥೆಗಳ ಮಾಲೀಕರು, ಮಾಧ್ಯಮವಲ್ಲದ ಹಲವು ಕ್ಷೇತ್ರಗಳಲ್ಲಿ ವ್ಯಾಪಾರ-ವ್ಯವಹಾರವನ್ನು ಹೊಂದಿದ್ದಾರೆ. ಸರ್ಕಾರದ ನೀತಿ-ನಿರ್ಣಯಗಳ ಮೇಲೆ ಅವರು ಅವಲಂಬಿತರಾಗಿದ್ದಾರೆ. ಈ ಅವಲಂಬನೆ ಅವರ ಮಾಲೀಕತ್ವದ ಸುದ್ದಿ ಸಂಸ್ಥೆಗಳ ಸಂಪಾದಕೀಯ ನಿಲುವುಗಳ ಮೇಲೆ ಪರಿಣಾಮ ಬೀರಿ ಪತ್ರಿಕೋದ್ಯಮದ ಪಾವಿತ್ರ್ಯತೆ ಮತ್ತು ಸ್ವತಂತ್ರತೆಯನ್ನು ಸಮಾಧಿ ಮಾಡುತ್ತಿದೆ. ಕಾರ್ಪೊರೇಟ್ ಮತ್ತು ರಾಜಕೀಯ ಕ್ಷೇತ್ರಗಳ ಕೂಡಾವಳಿಯ ಫಲವಾಗಿ; ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಸುಳ್ಳುಗಳು ಮರೆಮಾಚಲ್ಪಟ್ಟು ಜನರಿಗೆ ಸತ್ಯ ತಿಳಿಯದಾಗಿದೆ.

ಕಾರ್ಪೊರೇಟ್ ಮತ್ತು ರಾಜಕೀಯ ನಾಯಕರ ಮರ್ಜಿಯಲ್ಲಿ ಮಾಧ್ಯಮ ಇರುವುದರಿಂದ ಸಾರ್ವಜನಿಕ ಸಂವಾದ ಸತ್ತಿದೆ. ಭಿನ್ನಮತದ ಧ್ವನಿ ದಮನಗೊಂಡಿದೆ. ಸ್ಥಾಪಿತ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಕಥನಗಳನ್ನು ಕಟ್ಟುತ್ತಿರುವುದರಿಂದ, ಪ್ರಶ್ನೆ ಮತ್ತು ವಿಮರ್ಶೆ ಅಂಚಿನತ್ತ ತಳ್ಳಲ್ಪಟ್ಟಿದೆ. ಇದು ಪತ್ರಿಕೋದ್ಯಮದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದೆ. ಪ್ರಜಾಸತ್ತಾತ್ಮಕ ಹೊಣೆಗಾರಿಕೆ ಕಣ್ಮರೆಯಾಗಿದೆ.

ರಾಜಕಾರಣಿಗಳ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಮಾಲೀಕರ ಸಂಯೋಜನೆಯ ಉತ್ತಮ ಉದಾಹರಣೆಯಾಗಿ ಅಂಬಾನಿ ಮಾಲೀಕತ್ವದ ರಿಲಯನ್ಸ್ ಇಂಡಸ್ಟ್ರೀಸ್ ಹಿಡಿತದಲ್ಲಿ ಇಂದು 50ಕ್ಕೂ ಹೆಚ್ಚು ಮಾಧ್ಯಮ ಸಂಸ್ಥೆಗಳಿವೆ. ಮತ್ತೊಬ್ಬ ಕಾರ್ಪೊರೇಟ್ ಕುಳ ಗೌತಮ್ ಅದಾನಿ ಕೈಯಲ್ಲಿ ಪ್ರತಿಷ್ಠಿತ ಎನ್‌ಡಿಟಿವಿ ಇದೆ. ಇವರಿಬ್ಬರೂ ಪ್ರಧಾನಿ ಮೋದಿಯವರ ಆಪ್ತರಾಗಿದ್ದಾರೆ. ಮಾಧ್ಯಮಗಳ ಬೆಂಬಲದಿಂದ ಕಮಲದ ಕೆಸರು ಕಾಣದಂತಾಗಿದೆ. ಆರ್‌ಎಸ್‌ಎಸ್‌ನ ಬಲದಿಂದ ಬಿಜೆಪಿ ಬೆಳೆಯುತ್ತಿದೆ. ಇವೆರಡರ ಬೆಂಬಲವಿಲ್ಲದ ಬಿಜೆಪಿಯನ್ನು ಊಹಿಸಿಕೊಳ್ಳುವುದೂ ಕಷ್ಟವಿದೆ. ಹಾಗಾಗಿ, ಬಿಜೆಪಿಯಿಂದ ದೇಶವನ್ನು ಪಾರು ಮಾಡಬೇಕಾದರೆ, ಮೊದಲು ಮನುವಾದಿ ಆರ್‌ಎಸ್‌ಎಸ್ ಮತ್ತು ಅಮೇಧ್ಯ ಮೆಲ್ಲುತ್ತಿರುವ ಮಾಧ್ಯಮಗಳನ್ನು ದೂರ ಇಡಬೇಕಾಗಿದೆ.

ಕೇಂದ್ರ ತಂಡದ ಅಧಿಕಾರಿಗಳಿಂದ ನರೇಗಾ ಕಾಮಗಾರಿ ಪರಿಶೀಲನೆ

ರಾಯಚೂರು ಫೆಬ್ರವರಿ 17

ತಾಲ್ಲೂಕಿನ ಚಂದ್ರಬಡಾ ಹಾಗೂ ಬಾಯಿದೊಡ್ಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳನ್ನು ಕೇಂದ್ರ ಆಡಿಟ್ ತಂಡದ ಅಧಿಕಾರಿ ಕುಮುದ್ ದುಬೆ ಅವರು ಫೆ.16ರ ಸೋಮವಾರ ದಂದು ಭೇಟಿ ನೀಡಿ ಪರಿಶೀಲನೆ ಮಾಡಿದರು.

ಮೊದಲಿಗೆ ಚಂದ್ರಬಡಾ ಗ್ರಾಮ ಪಂಚಾಯತಿ ಕಚೇರಿಗೆ ಭೇಟಿ ನೀಡಿ ಕಾಮಗಾರಿ ಕಡತ, ನೋಂದಣಿ, ಎನ್.ಎಂ.ಎ.ಎಸ್. ಹಾಜರಾತಿಗಳಿಗೆ ಸಂಬಧಿಸಿದ ಮಾಹಿತಿಯನ್ನು ಪಡೆದುಕೊಂಡರು.

ನತರ ಅರಿಸಿಗೇರಾ ತಾಂಡದಲ್ಲಿರುವ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿದರು.

ನಂತರ ನಾಗನದೊಡ್ಡ ಗ್ರಾಮದಲ್ಲಿರುವ ಸಾಮಾಜಿಕ ಅರಣ್ಯದಲ್ಲಿ ಕಂದಕ ಬದು ನಿರ್ಮಾಣ, ದನದ ಕೊಟ್ಟಿಗೆ ಹಾಗೂ ಚಿಂತಲ ಕುಂಟ ಅಮೃತ ಸರೋವರ ಕೆರೆ ಕಾಮಗಾರಿಗಳನ್ನು ವೀಕ್ಷಿಸಿದರು.

ನಂತರ ಚಂದ್ರಬಡಾ ಗ್ರಾಮದಲ್ಲಿರುವ ಕೀರಾಕುಂಟ ಅಮೃತ ಸರೋವರ ಕೆರೆ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿದರು. ನಂತರ ಬಾಯಿ ದೊಡ್ಡ ಗ್ರಾಮ ಪಂಚಾಯತಿಯ ಕಡಗಂದೊಡ್ಡಿ ಗ್ರಾಮದ ಮೆಟಲ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು.

ನಂತರ ಕುರಬದೊಡ್ಡಿ ಗ್ರಾಮದ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕೂಲಿ ಕಾರ್ಮಿಕರ ಎನ್.ಎಂ.ಎ.ಎಸ್. ಹಾಜರಾತಿ, ಉದ್ಯೋಗ ಚೀಟಿ ಮತ್ತು ಕೆಲಸದ ಪ್ರಮಾಣವನ್ನು ಪರಿಶೀಲಿಸಿದರು. ನಂತರ ಚಂದ್ರಬಡಾ ಗ್ರಾಮ ಪಂಚಾಯತಿಯ ಕಟ್ಲಟ್ಕೂರು ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾರ್, ಸಹಾಯಕ ನಿರ್ದೇಶಕರು ಹನುಮಂತ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಡಿಪಿಎಮ್, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಸೇರಿದಂತೆ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಇದ್ದರು.

ವಿವಾದಿತ ಗ್ರೇಟ್ ನಿಕೋಬಾರ್ ಯೋಜನೆಗೆ ಸಮ್ಮತಿ; ಪರಿಸರಕ್ಕೆ ಗಂಡಾಂತರ!



ಪರಿಸರ ರಕ್ಷಣೆಯ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಬೇಕಾದ ಮಂಡಳಿಯೇ, ಪರಿಸರ ನಾಶಕ್ಕೆ ಅನುಮತಿ ನೀಡಿದೆ. ಪರಿಸರ ಮತ್ತು ಮಾನವೀಯ ವಿನಾಶದ ಪ್ರಮಾಣವು ಅತಿ ದುಬಾರಿಯಾಗಿರುವುದರಿಂದ ದೀರ್ಘಕಾಲೀನವಾಗಿ ದೇಶಕ್ಕೆ ಹಾನಿಯಾಗಬಹುದು.

ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ವಿವಾದಿತ ಯೋಜನೆಗಳಲ್ಲಿ ಒಂದಾದ ಗ್ರೇಟ್ ನಿಕೋಬಾರ್ ಯೋಜನೆಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ () ಸಮ್ಮತಿ ನೀಡಿದೆ. ಸುಮಾರು 92,000 ಕೋಟಿ ರೂ. ವೆಚ್ಚದಲ್ಲಿ ನಿಕೋಬಾರ್ ದ್ವೀಪವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುತ್ತೇವೆಂದು ಮೋದಿ ಸರ್ಕಾರ 2021ರಲ್ಲಿ ಈ ಯೋಜನೆಯನ್ನು ರೂಪಿಸಿತ್ತು. ಆದರೆ, ಈ ಯೋಜನೆಯು ಪರಿಸರ ವ್ಯವಸ್ಥೆ ಮತ್ತು ಅಲ್ಲಿನ ನಿವಾಸಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆಂದು ವಿರೋಧ ವ್ಯಕ್ತವಾಗಿತ್ತು. ಆದಾಗ್ಯೂ, ಯೋಜನೆಗೆ ಎನ್‌ಜಿಟಿ ಅನುಮೋದನೆ ನೀಡಿದೆ. ಪರಿಸರ ಅನುಮತಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಮಂಜಸ ಕಾರಣಗಳಿಲ್ಲ ಎಂದು ಎನ್‌ಜಿಟಿ ಹೇಳಿದೆ. ಎನ್‌ಜಿಟಿ ಆದೇಶವು ನಿಕೋಬಾರ್ ನಿವಾಸಿಗಳಲ್ಲಿ ಆತಂಕ ಹುಟ್ಟುಹಾಕಿದೆ.

ಸೋಮವಾರ, ಯೋಜನೆಯ ದಾಖಲೆಗಳನ್ನು ಪರಿಶೀಲಿಸಿರುವ ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪೀಠವು, ''ಹಸ್ತಕ್ಷೇಪ ಮಾಡಲು ಯಾವುದೇ ಕಾರಣಗಳಿಲ್ಲ. ಯೋಜನೆಯಲ್ಲಿ ಪೂರಕ ರಕ್ಷಣಾ ಕ್ರಮಗಳು ಇರುವುದನ್ನು ನಾವು ಗಮನಿಸಿದ್ದೇವೆ. ಯೋಜನೆಯ ಕಾರ್ಯತಂತ್ರದ ಪ್ರಾಮುಖ್ಯತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಹಾಗೆಯೇ, ದ್ವೀಪ ಕರಾವಳಿ ನಿಯಂತ್ರಣ ವಲಯದ () ನಿಯಮಗಳನ್ನು ನಿರ್ಲಕ್ಷಿಸುವಂತಿಲ್ಲ'' ಎಂದು ಹೇಳಿದೆ.

ಅಂಡಮಾನ್-ನಿಕೋಬಾರ್ ದ್ವೀಪಸಮೂಹದ ದಕ್ಷಿಣ ಭಾಗದಲ್ಲಿರುವ ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಅಂತಾರಾಷ್ಟ್ರೀಯ ಕಂಟೈನರ್ ಟ್ರಾನ್ಸ್ ಶಿಪ್‌ಮೆಂಟ್ ಬಂದರು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ವಿದ್ಯುತ್ ಸ್ಥಾವರ (ಗ್ಯಾಸ್ ಮತ್ತು ಸೌರ ಆಧಾರಿತ 450), ಏಕೀಕೃತ ಪಟ್ಟಣದ ಅಭಿವೃದ್ಧಿ ಹಾಗೂ ಸಂಬಂಧಿತ ಮೂಲಸೌಕರ್ಯಗಳನ್ನು ನಿರ್ಮಿಸುವುದು ಯೋಜನೆಯ ಪ್ರಮುಖ ಭಾಗವಾಗಿದೆ. ಯೋಜನೆಯು ಮಲಾಕ್ಕಾ ನದಿ ಕಣಿವೆಯನ್ನು ಭಾರತದ ಮುಖ್ಯ ಸಮುದ್ರ ಸಂಪರ್ಕ ಹಬ್ ಆಗಿ ನಿರ್ಮಿಸಿಕೊಳ್ಳುವುದು ಕೇಂದ್ರ ಸರ್ಕಾರದ ತಂತ್ರವಾಗಿದೆ.

ನಿಕೋಬಾರ್‌ನ 166 ಚದರ ಕಿ.ಮೀ. ವ್ಯಾಪ್ತಿಯನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುವ ಈ ಬೃಹತ್ ಯೋಜನೆಯು 130 ಚ.ಕಿ.ಮೀ. ಅರಣ್ಯ ಭೂಮಿಯನ್ನು ಒಳಗೊಳ್ಳಲಿದೆ. ಈ ಪ್ರದೇಶದ ಸುಮಾರು 80-85% ಭಾಗವು ಪ್ರಾಚೀನ ಉಷ್ಣವಲಯದ ಸದಾ ಹಸಿರು ಮಳೆಕಾಡುಗಳಿಂದ ಆವೃತವಾಗಿದೆ. ಇದು ಸುಂದರಲ್ಯಾಂಡ್ ಬಯೋಡೈವರ್ಸಿಟಿ ಹಾಟ್‌ಸ್ಪಾಟ್‌ನ ಭಾಗವಾಗಿದೆ. ಆದರೆ, ಈ ಮಳೆಕಾಡುಗಳಿಗೆ ಕೇಂದ್ರ ಸರ್ಕಾರ ಕೊಡಲಿ ಹಾಕಲು ಮುಂದಾಗಿದೆ. ಅದಕ್ಕೆ, ಎನ್‌ಜಿಟಿ ಕೂಡ ಅನುಮೋದನೆ ನೀಡಿದೆ.

ಯೋಜನೆಯಿಂದಾಗಿ ನಿಕೋಬಾರ್ ಪರಿಸರದ ಮೇಲಿನ ಪರಿಣಾಮಗಳು ಅತ್ಯಂತ ಭಯಾನಕವಾಗಿವೆ. ಕೇಂದ್ರ ಸರ್ಕಾರದ ಅಂದಾಜಿನ ಪ್ರಕಾರ ಸುಮಾರು 8.5 ಲಕ್ಷದಿಂದ 10 ಲಕ್ಷ ಮರಗಳನ್ನು ಕಡಿಯಲಾಗುತ್ತದೆ. ಆದರೆ, ಸ್ವತಂತ್ರ ಪರಿಸರ ತಜ್ಞರು ಮತ್ತು ಜೀವಶಾಸ್ತ್ರಜ್ಞರು ಹೇಳುವಂತೆ; ಯೋಜನೆಗಾಗಿ ಈ ಪ್ರದೇಶದಲ್ಲಿ ಕನಿಷ್ಠ 38 ಲಕ್ಷದಿಂದ 1 ಕೋಟಿ ಮರಗಳನ್ನು ಕಡಿಯುವ ಸಾಧ್ಯತೆಗಳಿವೆ. ಇದು ದ್ವೀಪದ ಸುಮಾರು 12-20% ಕಾಡನ್ನು ಸಂಪೂರ್ಣವಾಗಿ ನಾಶಮಾಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಗಲತಿಯಾ ಬೇ ( )ಯಲ್ಲಿ ಬಂದರು ನಿರ್ಮಾಣಕ್ಕಾಗಿ ಡ್ರೆಡ್ಜಿಂಗ್ ಮಾಡುವುದರಿಂದ ಕೋರಲ್ ರೀಫ್‌ಗಳು, ಮ್ಯಾಂಗ್ರೋವ್ ಕಾಡುಗಳು ಹಾಗೂ ಸಮುದ್ರ ಹುಲ್ಲುಗಾವಲುಗಳು ಸಂಪೂರ್ಣವಾಗಿ ನಾಶವಾಗುವ ಅಪಾಯವಿದೆ. ಇದರಿಂದ, ದ್ವೀಪವು ಸುನಾಮಿ ಮತ್ತು ಚಂಡಮಾರುತಗಳಿಂದ ಸ್ವಾಭಾವಿಕ ರಕ್ಷಣೆಯನ್ನು ಕಳೆದುಕೊಳ್ಳುತ್ತದೆ.

ನಿಕೋಬಾರ್

ಅಲ್ಲದೆ, ನಿಕೊಬಾರ್ ದ್ವೀಪವು ನಿಕೋಬಾರ್ ಮೆಗಾಪೋಡ್ (ನಿಕೋಬಾರ್‌ನಲ್ಲಿ ಮಾತ್ರವೇ ಕಂಡುಬರುವ ಪಕ್ಷಿ), ಲೆದರ್‌ಬ್ಯಾಕ್ ಟರ್ಟಲ್, ನಿಕೋಬಾರ್ ಮ್ಯಾಕಾಕ್, ಉಪ್ಪು ನೀರಿನ ಮೊಸಳೆಗಳು ಮುಂತಾದ ಅಪರೂಪದ ಮತ್ತು ಸ್ಥಳೀಯ ಪ್ರಭೇದಗಳ ಆವಾಸ ಸ್ಥಾನವಾಗಿದೆ. ಇಲ್ಲಿನ ಅರಣ್ಯ ನಾಶವು ಈ ಪ್ರಭೇದಗಳ ನೆಲೆಗಳನ್ನು ಸಂಪೂರ್ಣವಾಗಿ ಹಾನಿ ಮಾಡುತ್ತದೆ. ಪ್ರಭೇದಗಳ ಅವನತಿಗೂ ಕಾರಣವಾಗುತ್ತದೆ. ಅನೇಕ ಜಾತಿಯ ಪ್ರಾಣಿ-ಪಕ್ಷಿಗಳನ್ನು ವಿನಾಶದ ಅಂಚಿಗೆ ದೂಡುತ್ತದೆ.

ಮುಖ್ಯವಾಗಿ, ನಿಕೋಬಾರ್‌ನ ಮೂಲನಿವಾಸಿ ಸಮುದಾಯಗಳ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ಉದ್ದೇಶಿತ ಯೋಜನೆಗೆ ಬಳಕೆಯಾಗುವ 166.10 ಚ.ಕಿ.ಮೀ. ಭೂಮಿಯಲ್ಲಿ ಸುಮಾರು 84.10 ಚ.ಕಿ.ಮೀ ಭೂಮಿಯು ನಿಕೋಬಾರ್ ಮೂಲನಿವಾಸಿಗಳ ವಾಸಸ್ಥಳ. ಇದೇ ಪ್ರದೇಶದಲ್ಲಿ 2004ರಲ್ಲಿ ಅಪ್ಪಳಿಸಿದ ಸುನಾಮಿಗೆ ನಿಕೋಬಾರ್‌ನ ನೂರಾರು ಮಂದಿ ಬಲಿಯಾಗಿದ್ದರು. ಇದೀಗ, ಅಲ್ಲಿನ ಜನರು ತಮ್ಮ ಪೂರ್ವಜರ ಭೂಮಿಯನ್ನೂ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.

ಪ್ರಸ್ತುತ, ಭೂಸ್ವಾಧೀನಕ್ಕೆ ಒಳಗಾಗುವ ಭೂಮಿಯಲ್ಲಿ ಶೋಂಪೆನ್ ಮತ್ತು ನಿಕೋಬಾರೀಸ್ ಎಂಬ ಎರಡು ಮೂಲನಿವಾಸಿ ಸಮುದಾಯಗಳ ಸುಮಾರು 1,700-2,000 ಜನರು ವಾಸಿಸುತ್ತಿದ್ದಾರೆ. ಇವರಲ್ಲಿ, ಶೋಂಪೆನ್ ಸಮುದಾಯದ ಸುಮಾರು 200-400 ಜನರು ಪೂರ್ಣ ಅಥವಾ ಭಾಗಶಃ ಸಂಪರ್ಕರಹಿತರಾಗಿದ್ದಾರೆ. ಅವರು ತಮ್ಮ ಇಡೀ ಬದುಕಿಗೆ ಮಳೆಕಾಡನ್ನೇ ಆಶ್ರಯಿಸಿದ್ದಾರೆ. ಅವರು ಸಾವಿರಾರು ವರ್ಷಗಳಿಂದ ಕಾಡುಗಳಲ್ಲಿ ಬೇಟೆ ಮತ್ತು ಸಣ್ಣ ಕೃಷಿಕರಾಗಿ ಜೀವಿಸುತ್ತಿದ್ದಾರೆ.

ಮೋದಿ ಸರ್ಕಾರದ ಯೋಜನೆಯು ಅವರ ಭೂಮಿ, ಅರಣ್ಯ ಮತ್ತು ಜೀವನಾಧಾರ ಸಂಪೂರ್ಣವಾಗಿ ಕಸಿದುಕೊಳ್ಳುತ್ತದೆ. ಅಲ್ಲದೆ, ಯೋಜನೆ ಅಡಿಯಲ್ಲಿ ನಿರ್ಮಾಣವಾಗುವ ಪಟ್ಟಣಕ್ಕೆ ಸುಮಾರು 3.5 ಲಕ್ಷಕ್ಕೂ ಹೆಚ್ಚು ಹೊರಗಿನವರು ದಾಂಗುಡಿ ಇಡಲಿದ್ದಾರೆ. ಇವರ ದುಂಡಾವರ್ತನೆಗಳು ಸ್ಥಳೀಯ ಸಂಸ್ಕೃತಿ, ಭಾಷೆ ಹಾಗೂ ಜೀವನಶೈಲಿಯನ್ನು ಹಾಳುಗೆವುವ ಅಪಾಯವಿದೆ. ಫಾರೆಸ್ಟ್ ರೈಟ್ಸ್ ಆಕ್ಟ್-2006ರಂತೆ ಮೂಲನಿವಾಸಿಗಳ ಸಮ್ಮತಿ ಇಲ್ಲದೆ ಯೋಜನೆ ಮುಂದುವರೆಯುತ್ತಿರುವುದು ಕಾನೂನು ಉಲ್ಲಂಘನೆಯೂ ಆಗಿದೆ.

ಹೀಗಾಗಿ, ಸರ್ವೈವಲ್ ಇಂಟರ್‌ನ್ಯಾಷನಲ್ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳು ಸರ್ಕಾರದ ಯೋಜನೆಯನ್ನು ಗುಂಪು ನರಮೇಧ ಎಂದು ಕರೆದಿವೆ. 2024ರಲ್ಲಿ 39 ಜಾಗತಿಕ ತಜ್ಞರು ಶೋಂಪೆನ್‌ಗೆ ಮರಣದಂಡನೆ ಎಂದು ಯೋಜನೆಯನ್ನು ಖಂಡಿಸಿದ್ದಾರೆ. ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಯೋಜನೆಯನ್ನು ಪರಿಸರ ದುರಂತವೆಂದು ಕರೆದಿವೆ. ಯೋಜನೆಯ ರದ್ದತಿಗೆ ಒತ್ತಾಯಿಸಿವೆ.

ಆದರೂ, ಯೋಜನೆಗೆ ಎನ್‌ಜಿಟಿ ಅನುಮೋದನೆ ನೀಡಿದೆ. ಪರಿಸರ ರಕ್ಷಣೆಯ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಬೇಕಾದ ಮಂಡಳಿಯೇ, ಪರಿಸರ ನಾಶಕ್ಕೆ ಅನುಮತಿ ನೀಡಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ. ಪರಿಸರ ಮತ್ತು ಮಾನವೀಯ ವಿನಾಶದ ಪ್ರಮಾಣವು ಅತಿ ದುಬಾರಿಯಾಗಿರುವುದರಿಂದ ದೀರ್ಘಕಾಲೀನವಾಗಿ ದೇಶಕ್ಕೆ ಹಾನಿಯಾಗಬಹುದು.

ಅರಣ್ಯವನ್ನು ನಾಶ ಮಾಡಿ, ಆ ಜಾಗದಲ್ಲಿ ಟ್ರಾನ್ಸ್ ಶಿಪ್‌ಮೆಂಟ್ ಬಂದರು, ಸಮಗ್ರ ಪಟ್ಟಣ, ನಾಗರಿಕ ಮತ್ತು ಮಿಲಿಟರಿ ವಿಮಾನ ನಿಲ್ದಾಣ ಹಾಗೂ 450- ಗ್ಯಾಸ್ ಮತ್ತು ಸೌರಶಕ್ತಿ ಆಧಾರಿತ ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವುದು ಅಭಿವೃದ್ಧಿಯಲ್ಲ ವಿನಾಶ ಎಂಬುದನ್ನು ಸರ್ಕಾರವೂ, ಎನ್‌ಜಿಟಿಯೂ ಅರಿತುಕೊಳ್ಳಬೇಕಿದೆ.

ಹಾಸನ ಮಣ್ಣಿನ ಹೆಣ್ಣು ಬೇರುಗಳು ಅರಳುವ ಮುನ್ನವೇ ಉದುರಿಬಿದ್ದ ಮೊಗ್ಗು- ವಸು ಮಳಲಿ

ಹಾಸನ ಜಿಲ್ಲೆಯ ಹೆಣ್ಣುಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸದ್ದಿಲ್ಲದೆ ಕೆಲಸ ಮಾಡುತ್ತಾ, ತಮ್ಮ ಛಾಪು ಮೂಡಿಸುತ್ತ, ಕೊಡುಗೆ ನೀಡುತ್ತಾ, ಸಾಧಿಸುತ್ತಾ ಹೋಗಿದ್ದಾರೆ. ಇದು, ಅವರ ಕುರಿತು ವಿವಿಧ ಲೇಖಕ/ಲೇಖಕಿಯರಿಂದ ಒಂದು ಪುಟ್ಟ ದಾಖಲೀಕರಣ

ಇತಿಹಾಸವೆಂದರೆ ಕೇವಲ ರಾಜಮಹಾರಾಜರ ವಂಶಾವಳಿ ಅಥವಾ ಯುದ್ಧಗಳ ಪಟ್ಟಿಯಲ್ಲ; ಅದು ಜನಸಾಮಾನ್ಯರ, ಅಲಕ್ಷಿತ ಸಮುದಾಯಗಳ ಮತ್ತು ಮೌಖಿಕ ಪರಂಪರೆಯ ಜೀವಂತ ದಾಖಲೆ ಎಂದು ನಂಬಿದವರು ಡಾ.ವಸು ಮಳಲಿ. ಇವರು ಹಾಸನ ಜಿಲ್ಲೆಯ ಮಳಲಿ ಗ್ರಾಮದವರಾದ ಹಿರಿಯ ಸಾಹಿತಿ ಮಳಲಿ ವಸಂತಕುಮಾರ್ ಹಾಗೂ ಶಾಂತಾ ಅವರ ಪುತ್ರಿಯಾಗಿ 1967ರಲ್ಲಿ ಜನಿಸಿದರು. ಅವನಿ ಇವರ ಮಗಳು. ವಸು ಸಹೋದರ ಖ್ಯಾತ ಫೋಟೋಗ್ರಾಫರ್ ರತ್ನ ಎಂ.ವಿ. ವಸು ಕೇವಲ ಒಬ್ಬ ಅಕಾಡೆಮಿಕ್ ವಿದ್ವಾಂಸೆಯಾಗಿ ಉಳಿಯದೆ ಇತಿಹಾಸ ತಜ್ಞೆ, ಕವಯಿತ್ರಿ, ಅಂಕಣಗಾರ್ತಿ, ಹೋರಾಟಗಾರ್ತಿ ಹಾಗೂ ಸಿನಿಮಾ ನಿರ್ದೇಶಕರಾಗಿಯೂ ಚಿರಪರಿಚಿತರು.

ವಸು ಅವರ ವಿದ್ಯಾಭ್ಯಾಸದ ಹಾದಿಯೇ ಪ್ರೇರಣಾದಾಯಕ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು, ಅದೇ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದರು. ಮೈಸೂರು ರಾಜ್ಯವನ್ನಾಳಿದ ಜಯಚಾಮರಾಜೇಂದ್ರ ಒಡೆಯರ್ ಅವರ ಕುರಿತಾದ ಅವರ ಸಂಶೋಧನೆ ಅಕಾಡೆಮಿಕ್ ವಲಯದಲ್ಲಿ ಇಂದಿಗೂ ಮನ್ನಣೆ ಪಡೆದಿದೆ. ತನ್ನ ತವರಿನ ಮಳಲಿ ಗಿಡ್ಡಮ್ಮನ ಕುರಿತೂ ಆಳ ಸಂಶೋಧನೆ ನಡೆಸಿದ್ದರು. ಕೇವಲ ಓದಿನಲ್ಲಿ ಮಾತ್ರವಲ್ಲದೆ, ವಿಶ್ವವಿದ್ಯಾನಿಲಯದ ಖೋ-ಖೋ ತಂಡದ ನಾಯಕಿಯಾಗಿಯೂ ಮಿಂಚಿದ್ದ ಅವರಿಗೆ ಬದುಕಿನ ಹೋರಾಟದಲ್ಲಿ ಸೋಲೊಪ್ಪದ ಗುಣ ಕ್ರೀಡೆಯಿಂದಲೇ ಬಂದಿತ್ತು ಎನ್ನಬಹುದು.

ಪ್ರಾಧ್ಯಾಪಕಿಯಾಗಿ ತುಮಕೂರಿನಲ್ಲಿ ವೃತ್ತಿ ಜೀವನ ಆರಂಭಿಸಿದರೂ ಕೆಲ ವರ್ಷಗಳ ನಂತರ, 1998ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗಕ್ಕೆ ಸೇರ್ಪಡೆಯಾದರು. ವಿದ್ಯಾರ್ಥಿಗಳಿಗೆ ಪಠ್ಯವನ್ನಷ್ಟೇ ಬೋಧಿಸದೆ ಸಂಶೋಧನೆಯ ಹೊಸ ವಿಧಾನಗಳನ್ನು ಇವರು ಕಲಿಸುತ್ತಿದ್ದರು. ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿಯೂ ಕೆಲಸ ಮಾಡಿದ್ದ ವಸು ಮಳಲಿ ಒಳ್ಳೆಯ ವಾಗ್ಮಿಯಾಗಿದ್ದರು. ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಅವರು ಕೊನೆಯದಾಗಿ ನೀಡಿದ್ದ ವಿಶೇಷ ಉಪನ್ಯಾಸವು ಆ ವಿಶ್ವವಿದ್ಯಾನಿಲಯ ಕಂಡ ಅತ್ಯಂತ ಶ್ರೇಷ್ಠ ಹತ್ತು ಉಪನ್ಯಾಸಗಳಲ್ಲಿ ಒಂದೆಂದು ಇಂದಿಗೂ ಪರಿಗಣಿಸಲ್ಪಟ್ಟಿದೆ.

ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಎಂಬ ಸಂಶೋಧನಾ ಕೃತಿಯ ಜೊತೆಗೆ ಮೊಳಕೆಯೊಡೆದ ಬೀಜ'(ಕವಿತೆಗಳ ಸಂಗ್ರಹ), ಕಳ್ಳು-ಬಳ್ಳಿ ಪ್ರಜಾವಾಣಿಯಲ್ಲಿ ಪ್ರಕಟವಾದ ಅವರ ಜನಪ್ರಿಯ ಅಂಕಣ ಬರಹಗಳ ಸಂಕಲನ, ಇತಿಹಾಸವನ್ನು ಜನರ ಚರಿತ್ರೆಯಾಗಿ ಕಟ್ಟುವ ಸಂಕೇತವಾಗಿ ಕನ್ನಡದೊಳ್ ಭಾವಿಸಿದ ಜನಪದಂ'(ಸಂಪಾದನೆ), ಭಾರತ ಚರಿತ್ರೆಯ ಆಯ್ದ ವಿಷಯಗಳು, ಕರ್ನಾಟಕ ಚರಿತ್ರೆಯ ಆಯ್ದ ವಿಷಯಗಳು ಹಾಗೂ ಕನ್ನಡ ಮೌಖಿಕ ಇತಿಹಾಸ -ಇವು ಡಾ.ವಸು ಮಳಲಿ ಅವರ ಪ್ರಮುಖ ಕೃತಿಗಳು.

ಸಾಂಪ್ರದಾಯಿಕ ಇತಿಹಾಸಕಾರರು ದೂಳು ಹಿಡಿದ ಹಳೆಯ ದಾಖಲೆಗಳಲ್ಲಿ ಉತ್ತರ ಹುಡುಕುವಾಗ, ವಸು ಮಳಲಿ ಅವರು ಜನರ ಹಾಡುಗಳಲ್ಲಿ, ಮೌಖಿಕ ಕಥನಗಳಲ್ಲಿ ಇತಿಹಾಸವನ್ನು ಹುಡುಕುತ್ತಿದ್ದರು. ಒಡೆಯರ್ ಮನೆತನದ ಮೇಲೆ ಸಂಶೋಧನಾ ಕೃತಿ ಸಂಪಾದಿಸಿದರೂ, ಅವರ ಆಸಕ್ತಿ ಇದ್ದದ್ದು ಮಾತ್ರ ಅಲಕ್ಷಿತ ಸಮುದಾಯಗಳ ಮೇಲೆಯೇ. ಮಂಟೇಸ್ವಾಮಿ, ಮಲೆ ಮಾದೇಶ್ವರ ಹಾಗೂ ಮಳಲಿ ಗಿಡ್ಡಮ್ಮ ಕುರಿತ ಜಾನಪದ ರೂಪದ ಮೌಖಿಕ ಆಕರಗಳನ್ನು ಇಟ್ಟುಕೊಂಡು ಇತಿಹಾಸವನ್ನು ಜನಸಾಮಾನ್ಯರ ಕಣ್ಣೋಟದಿಂದ ನೋಡುವ ಪ್ರಯತ್ನ ಅವರದ್ದಾಗಿತ್ತು. ಅಂದರೆ, ಲಿಖಿತ ದಾಖಲೆಗಳಿಗಿಂತ ಹೆಚ್ಚಾಗಿ ಜನರ ನೆನಪುಗಳಿಗೆ, ಭಾವನೆಗಳಿಗೆ, ಅನುಭವಗಳಿಗೆ- ಕಿವಿಯಾಗುತ್ತಿದ್ದರು, ಕಣ್ಣಾಗುತ್ತಿದ್ದರು. ಹಾಗಾಗಿ ಇವರು ಸಂಪಾದಿಸಿದ ಕೃತಿ ಶೈಕ್ಷಣಿಕ ಸಂಶೋಧನೆಯಾಗಿರದೆ, ಅಧಿಕಾರಸ್ಥ ಚರಿತ್ರೆಯ ವಿರುದ್ಧದ ಒಂದು ಜನಪ್ರತಿರೋಧವಾಗಿ ಕಾಣಿಸುತ್ತದೆ.

ಹಿರಿಯ ಸಾಹಿತಿ, ಪ್ರಾಧ್ಯಾಪಕ ಹಾಗೂ ಕರುನಾಡಿನ ಸೌಹಾರ್ದ ಪರಂಪರೆಯ ಗಟ್ಟಿ ಕೊಂಡಿಯೆಂದೇ ಭಾವಿಸಲಾಗುವ ರಹಮತ್ ತರಿಕೆರೆ ಅವರು ಹೇಳುವಂತೆ, ವಸು ಅವರು ಬುದ್ಧನನ್ನು ಕೇವಲ ಧರ್ಮಗುರುವನ್ನಾಗಿ ನೋಡದೆ, ಭಾರತದ ಮೊದಲ ರಾಜಕೀಯ ದಾರ್ಶನಿಕನನ್ನಾಗಿ ಗುರುತಿಸಿದ್ದರು. ಅಲ್ಲಮಪ್ರಭು, ಅಂಬೇಡ್ಕರ್ ಮತ್ತು ಮಂಟೇಸ್ವಾಮಿಯವರಲ್ಲಿ ಅಡಗಿರುವ ಬೌದ್ಧ ಚಿಂತನೆಯ ಎಳೆಗಳನ್ನು ಗುರುತಿಸಿದ್ದರವರು.

ಕೇವಲ ಅಕ್ಷರಗಳಿಗಷ್ಟೇ ಸೀಮಿತವಾಗದ ವಸು ಮಳಲಿ, ಸಿನಿಮಾ ಮತ್ತು ಛಾಯಾಗ್ರಹಣದ ಮೂಲಕವೂ ತಮ್ಮ ಚಿಂತನೆಗಳನ್ನು ವಿಸ್ತರಿಸಿಕೊಂಡಿದ್ದರು. ಹಾಲಿವುಡ್‌ನಲ್ಲಿ ನಿರ್ದೇಶನದ ತರಬೇತಿ ಹಾಗೂ ಪುಣೆಯ ಫಿಲ್ಮ್ ಇನ್ಸ್ ಟಿಟ್ಯೂಟ್‌ನಲ್ಲಿ ಸಿನಿಮಾ ನಿರ್ಮಾಣದ ತರಬೇತಿ ಪಡೆದಿದ್ದ ಅವರು, ನೆತ್ತರು ಮತ್ತು ಗುಲಾಬಿಯಂತಹ ಕಿರುಚಿತ್ರಗಳನ್ನು ನಿರ್ದೇಶಿಸಿದರು. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಅವಕಾಶಗಳಿದ್ದರೂ ಹಾಲಿವುಡ್ ಸೆಳೆತಕ್ಕೆ ಸಿಲುಕದೆ ನೆಲದ ಜನರ ಕತೆ ಹೆಣೆಯಲು, ತೆರೆ ಮೇಲೆ ತರಲು ಅವರು ಮುಂದಾಗಿದ್ದರು. ನಿರ್ದೇಶಕಿಯಾಗಿ ನಕ್ಸಲ್ ಹೋರಾಟಗಾರ ಸಾಕೇತ್ ರಾಜನ್ ಅವರ ಬದುಕನ್ನು ಆಧರಿಸಿದ ಶಸ್ತ್ರ ಸಿನಿಮಾ ಮೊಟ್ಟಮೊದಲಿಗೆ ದೊಡ್ಡಪರದೆಯ ಮೇಲೆ ಕಾಣಬೇಕೆಂಬುದು ಅವರ ಕನಸಾಗಿತ್ತು. ಅವರ ದೃಷ್ಟಿಯಲ್ಲಿ ಶಸ್ತ್ರ ಎಂದರೆ ಕೇವಲ ಆಯುಧವಲ್ಲ; ದಮನಿತರ ಮೌನ, ಸಿಟ್ಟು ಮತ್ತು ಯೋಚನೆಗಳು ಕೂಡ ಒಂದು ಬಲವಾದ ಶಸ್ತ್ರಗಳೇ ಆಗಿದ್ದವು. ಈ ಸಿನಿಮಾದಲ್ಲಿ ನಟ ಕಿಶೋರ್ ಮುಖ್ಯ ಪಾತ್ರಲ್ಲಿದ್ದರು. ಆದರೆ ವಸು ಅವರ ಅಕಾಲಿಕ ಸಾವಿನಿಂದಾಗಿ ಚಿತ್ರ ಅರ್ಧಕ್ಕೇ ಸ್ಥಗಿತಗೊಂಡಿತು.

ವಸು ಮಳಲಿ ಅವರು ದೊಡ್ಡ ಮೊತ್ತದ ಸಂಬಳ ಪಡೆದು ಐಷಾರಾಮಿಯಾಗಿ ಬದುಕುವ ವಿಶ್ವವಿದ್ಯಾಲಯದ ಹವಾನಿಯಂತ್ರಿತ ಕೊಠಡಿಯ ಒಬ್ಬ ಅಧ್ಯಾಪಕಿಯಾಗಿರಲಿಲ್ಲ. ಬದಲಾಗಿ ನಿರ್ದೇಶಕರು, ಸಂಶೋಧಕರು, ಸ್ತ್ರೀವಾದಿ, ಎಡಪಂಥೀಯ ಚಿಂತಕರು ಹಾಗೂ ದಮನಿತರ ದನಿಯಾಗಿ ಚಳವಳಿಗಳ ಮೂಲಕ ಸದಾ ಬೀದಿಯ ಹೋರಾಟಗಳಲ್ಲಿ ಇದ್ದರು. ಲೈಂಗಿಕ ಕಾರ್ಯಕರ್ತೆಯರು, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ತುಳಿತಕ್ಕೊಳಗಾದವರ ಪರವಾದ ಅವರ ನಿಲುವುಗಳು ರಾಜಿಯಾಗದಂತಹವು. ಹೀಗೆ ದಣಿವರಿಯದಂತೆ ವೃತ್ತಿ, ಕುಟುಂಬ, ಬರವಣಿಗೆ, ಸಂಶೋಧನೆ, ಉಪನ್ಯಾಸಗಳು, ಚಳವಳಿ ಅಂತೆಲ್ಲ ಸದಾ ಸಮಾಜಮುಖಿಯಾಗಿ ದುಡಿಯುತ್ತಿದ್ದ ಅದಮ್ಯ ಚೈತನ್ಯವನ್ನು ಕಾಡಿದ್ದು ಸ್ತನ ಕ್ಯಾನ್ಸರ್!

ವಸು ಸಾವಿಗೆ ಹೆದರಿ ಕುಗ್ಗದೆ ಬದಲಿಗೆ ಅದನ್ನೂ ಸ್ವಾಗತಿಸಿ ಯಾವ ಕೊಂಕು ಇಲ್ಲದ ಗೆಳೆಯ ಎಂದು ಬರೆದದ್ದು ಕಂಡಾಗ, ಅವರು ಕೊನೆಯ ಕ್ಷಣದವರೆಗೂ ಜೀವನವನ್ನು ಉತ್ಕಟವಾಗಿ ಪ್ರೀತಿಸುವವರಾಗಿದ್ದರು, ವಾಸ್ತವದ ಕುರಿತು ಸ್ಥಿತಪ್ರಜ್ಞರಾಗಿದ್ದರೆನ್ನುವುದು ಅರಿವಾಗುತ್ತದೆ. ಅವರ ಈ ಬತ್ತದ ಉತ್ಸಾಹ, ಛಲದಿಂದಲೇ ಕ್ಯಾನ್ಸರ್ ಗೆದ್ದಿದ್ದರೂ ಹಠಾತ್ತನೇ ಕುಸಿದು ಬೀಳಿಸಿದ್ದ ರಕ್ತದೊತ್ತಡ, ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಬಾಗಿಲು ತಟ್ಟಿಸಿದರೆ, ಹೃದಯಾಘಾತ ಅವರ ಹೋರಾಟಕ್ಕೆ ಶಾಶ್ವತ ವಿಶ್ರಾಂತಿ ಕೊಟ್ಟುಬಿಟ್ಟಿತು.

2015ರ ಫೆಬ್ರವರಿ 3ರಂದು ಅವರು ಅಗಲಿದಾಗ, ಈ ನಾಡು ಒಬ್ಬ ನಿಸ್ವಾರ್ಥ ಚಿಂತಕಿಯನ್ನು ಕಳೆದುಕೊಂಡಿತು. ಹಾಸನದ ಕಲಾ ಕಾಲೇಜಿನ ಪದವಿ ವಿದ್ಯಾರ್ಥಿನಿಯಾಗಿದ್ದ ನನ್ನೊಳಗೆ ಅತೀವ ಸಂಕಟ. ಎಸ್‌ಎಫ್‌ಐ ಮೂಲಕ ವಿದ್ಯಾರ್ಥಿ ಚಳವಳಿಯಿಂದ ಎಡಚಿಂತನೆಯ ಸಂಪರ್ಕವಿದ್ದ ನನಗೆ, ಆ ವಲಯದ ಆಪ್ತರಾಗಿದ್ದ ವಸು ಮಳಲಿ ಅವರ ಸಾವು ಹತ್ತಿರದವರನ್ನೇ ಕಳೆದುಕೊಂಡಷ್ಟು ನೋವು ತಂದಿತ್ತು. ಅವರ ಫೋಟೋ ನೋಡಿದಾಗೆಲ್ಲ, ಸದಾ ಲವಲವಿಕೆಯಿಂದ ಎಲ್ಲರೆಡೆಗೆ ನಗು ಮೊಗದಿಂದಲೆ ಕಣ್ಣು ಹಾಯಿಸುತ್ತಿದ್ದಾರೇನೋ ಎಂಬ ಜೀವಂತಿಕೆಯ ಭಾವ ಮೂಡಿಸುತ್ತಾರೆ. ವಸು ಮಳಲಿ ಅವರನ್ನು ನಾನು ಒಮ್ಮೆಯೂ ಭೇಟಿಯಾಗಿರದಿದ್ದರೂ, ನನ್ನೊಳಗೆ ಅವರೊಂದು ಸದಾ ಸ್ಫೂರ್ತಿಯ ಚಿಲುಮೆ. ದೇಹ ಬಳಲಿದರೂ ಅಂತಃಶಕ್ತಿಯನ್ನು ಗಟ್ಟಿಗೊಳಿಸಿಕೊಂಡಿದ್ದವರನ್ನು ಆ ಕ್ಯಾನ್ಸರ್ ಹೇಗೆ ಸೋಲಿಸಿತು, ಸಾವು ಅದು ಹೇಗೆ ಆವರಿಸಿತು ಎಂಬ ವೇದನೆಯ ಜಿಜ್ಞಾಸೆ ಇಂದಿಗೂ ಮೂಡುತ್ತದೆ.

ಚಿತ್ರರಂಗದಲ್ಲಿ ಅಪಾರವಾದದ್ದನ್ನು ಸಾಧಿಸುವ ದೂರದ ಯೋಜನೆಗಳನ್ನು ಹಾಕಿಕೊಂಡಿದ್ದ ನಟ, ನಿರ್ದೇಶಕ, ನಿರ್ಮಾಪಕ ಶಂಕರ್‌ನಾಗ್ ಅವರ ಹಠಾತ್ ಸಾವು ಇಂದಿಗೂ ತುಂಬಲಾರದ ನಷ್ಟವನ್ನು ಉಂಟು ಮಾಡಿದಂತೆ ಹೇಗೆ ಭಾಸವಾಗುತ್ತದೆಯೇ ಹಾಗೆಯೇ ವಸು ಮಳಲಿ ಅವರ ಸಾವು ಕೂಡ ಅನ್ಯಾಯದ್ದು. ನಾಡಿನ ಜನಪರ ಚಳವಳಿಗೆ, ಸ್ತ್ರೀವಾದಿ ಚಿಂತನೆಗೆ, ಯುವಜನತೆಯನ್ನು ಬಡ್ಡಿದೆಚ್ಚರಿಸಲು ಹಾಗೂ ಇತಿಹಾಸವನ್ನು ಅರಿಯಲು ಸರಿಯಾದ ಮಾರ್ಗವನ್ನು ತೋರಿಸುವ ದಿಕ್ಸೂಚಿಯೊಂದನ್ನು ಕಳೆದುಕೊಂಡಂತಾಗಿದೆ. ಇಂದಿನ ಪ್ರಕ್ಷುಬ್ಧ ಸ್ಥಿತಿಯೊಳಗೆ ಹೋರಾಡುವ ಕೈಗಳು, ಮಿಡಿಯುವ ಹೃದಯಗಳು, ನೊಂದವರ ಸೊಲ್ಲು ಕೇಳುವ ಕಿವಿಗಳು ಎಷ್ಟಿದ್ದರೂ ಸಾಲದು. ಹಾಗಾಗಿ ವಸು ಮಳಲಿಯಂತವರು ಇರಬೇಕಿತ್ತು ಎಂಬ ಕನವರಿಕೆ ನನ್ನಂತೆ ಹಲವರೊಳಗಿದೆ.

ಚಿತ್ರೀಕರಣದಲ್ಲಿ ವಸು ಮಳಲಿ

ನನ್ನ ಮಾನಸ ಗುರುಗಳಾದ ಪುರುಷೋತ್ತಮ ಬಿಳಿಮಲೆಯವರು ಹೇಳಿರುವಂತೆ- ಚರಿತ್ರೆಯನ್ನು ಹೊಸದಾಗಿ ಬರೆಯುತ್ತಿದ್ದ ವಸು ಮಳಲಿ ಇಷ್ಟು ಬೇಗ ಚರಿತ್ರೆಯ ಪುಟಗಳನ್ನು ಸೇರಬಾರದಿತ್ತು. ತೆರೆದ ಪುಸ್ತಕದಂತಿರುವ ಅವರ ಬದುಕು-ಬರಹ ಹಳೆಯದನ್ನು ಪ್ರಶ್ನಿಸಿ, ಹೊಸ ಪರ್ಯಾಯಗಳನ್ನು ಹುಡುಕುವ ಧೈರ್ಯವನ್ನು, ಚಿಂತನೆಯನ್ನು ನಮಗೆ ಕಲಿಸುತ್ತದೆ. ಇತಿಹಾಸದ ಬಗ್ಗೆ ತಿಳಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಎನ್ನುವ ಮಾತಿನಂತೆ, ವಸು ಮಳಲಿ ಅವರ ಬದುಕು-ಬರಹ ಹಾಗೂ ಅವರ ವಿಚಾರಗಳನ್ನು ಅರಿಯದೆ ಇತಿಹಾಸದ ವಿದ್ಯಾರ್ಥಿಗಳ ಕಲಿಕೆ ಪರಿಪೂರ್ಣವಾಗದು ಎಂಬುದು ನನ್ನ ಅಚಲವಾದ ಅಭಿಮತ. ವಸು ಮಳಲಿಯವರ ಕಲಿಕಾ ವಿಧಾನ, ಉಪನ್ಯಾಸ, ಚಿಂತನೆಗಳು ಹಾಗೂ ಭವಿಷ್ಯದ ಕೆಲಸಗಳ, ಕನಸುಗಳ ಬಗ್ಗೆ ಅರಿತಿದ್ದವರಿಗೆ ಪೂರ್ಣ ಅರಳುವ ಮುನ್ನವೇ ಉದುರಿಬಿದ್ದ ಮೊಗ್ಗು ವಸು ಎಂಬ ಭಾವ ಎಂದಿಗೂ ಕಾಡುತ್ತದೆ. ವಸು ಅವರ ಅಕಾಲಿಕ ನಿರ್ಗಮನದ ನಂತರ ನಾಡಿನ ಹಲವು ಚಿಂತಕರು, ಅವರ ಆಪ್ತರು ಬರೆದಿದ್ದ ಬರಹಗಳ ಸಂಕಲನವು ಇದನ್ನು ದೃಢಗೊಳಿಸುತ್ತದೆ.

ಕೇವಲ 48 ವರ್ಷ ಜೀವಿಸಿ ಚರಿತ್ರೆಯ ಪುಟಗಳನ್ನು ಸೇರಿದ್ದರೂ, ಸಮಾಜವನ್ನು ನೋಡುವ ಮತ್ತು ಅರ್ಥಮಾಡಿಕೊಳ್ಳುವ ವಸು ಅವರ ವಿಭಿನ್ನ ದೃಷ್ಟಿಕೋನ ನಮ್ಮಂತವರ ಆಲೋಚನೆಗಳಿಗೆ ಪ್ರೇರಣೆಯಾಗಿ ಉಳಿಯುತ್ತದೆ. ಹಲವು ತಲೆಮಾರುಗಳಿಗೆ, ಅದರಲ್ಲೂ ಸಂವೇದನೆ ತುಂಬಿಕೊಂಡ ಹೃದಯಗಳಿಗೆ ಸ್ಫೂರ್ತಿಯ ಸೆಲೆಯಾಗಿ, ಸಮಾಜದ ಮೌನವನ್ನು ಮುರಿಯುವ ಶಕ್ತಿಯಾಗಿ ಉಳಿದಿರುವ ಡಾ.ವಸು ಮಳಲಿ ಅವರಿಗೆ ಇದೋ ನನ್ನ ಅಕ್ಷರ ನಮನಗಳು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR